ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಅನುಭವಿ ವೇಗಿ ಇಶಾಂತ್ ಶರ್ಮಾ ಅವರ ಅಮೋಘ ಬೌಲಿಂಗ್ (5 ವಿಕೆಟ್) ಬಲದಿಂದ ದೆಹಲಿ ತಂಡವು ಡಿ ಗುಂಪಿನ ಪಂದ್ಯದಲ್ಲಿ ರೈಲ್ವೇಸ್ ವಿರುದ್ಧ ಜಯ ಗಳಿಸಿತು.

07 ಜನವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 295 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಟೀಕೆಗಳನ್ನು ಮೀರಿ ಗೆದ್ದ ಪಂಚ ಗ್ಯಾರಂಟಿ » 2

ಯುವಕರು ಶಿಸ್ತು, ಆತ್ಮಸ್ಥೈರ್ಯ ಮೈಗೂಡಿಸಿಕೊಳ್ಳಬೇಕು » 3

ಚನ್ನಕೇಶವ ನಗರ ವಾಸಿಗಳಿಗೆ ತಿಂಗಳೊಳಗೆ ಹಕ್ಕುಪತ್ರ » 4

# ದೀರ್ಘಾವಧಿ ಬಳಿಕ ಪೂರ್ಣಾವಧಿ ವಿಶ್ವಾಸ

- 5 ವರ್ಷ ಅಧಿಕಾರಾವಧಿ ಪೂರ್ಣಗೊಳಿಸುವೆ: ಸಿಎಂ
- ಅರಸು ದಾಖಲೆ ಸರಿಗಟ್ಟಿದ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಬೆಂಗಳೂರು :** ದೀರ್ಘಾವಧಿ ಮುಖ್ಯಮಂತ್ರಿಯಾಗುವ ಮೂಲಕ ದಿವಂಗತ ದೇವರಾಜ ಅರಸು ಅವರ ದಾಖಲೆ ಸರಿಗಟ್ಟಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೀಗ ಪೂರ್ಣಾವಧಿ ಮುಖ್ಯಮಂತ್ರಿ ಆಗುವ ಆಸೆ ಬಿಚ್ಚಿಟ್ಟಿದ್ದಾರೆ.

ಮೈಸೂರಿನಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಹೈ ಕಮಾಂಡ್ ಮೇಲೆ ಪೂರ್ಣ ವಿಶ್ವಾಸವಿದೆ. ಪೂರ್ಣಾವಧಿ ಮುಖ್ಯಮಂತ್ರಿಯಾಗುವ ವಿಶ್ವಾಸವೂ ಇದೆ. ಏನೇ ಆದರೂ ಹೈಕಮಾಂಡ್ ಎಲ್ಲವನ್ನೂ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಪುನರುಚ್ಚರಿಸಿದರು.

ದೇವರಾಜ ಅರಸು ಅವರ ಅಧಿಕಾರಾವಧಿಯ ದಾಖಲೆ ಸರಿಗಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿ, ನನಗೆ ದೇವರಾಜ ಅರಸು ದಾಖಲೆಯ ಬಗ್ಗೆ ಅರಿವು ಇರಲಿಲ್ಲ. ಯಾವ ದಾಖಲೆ ಮುರಿಯಬೇಕೆಂಬುದು ನನ್ನ ಗಮನದಲ್ಲಿ ಇರಲಿಲ್ಲ. ಜನರ ಆಶೀರ್ವಾದದಿಂದ ಎಲ್ಲವೂ ನಡೆದು ಹೋಗಿದೆ. ಇವತ್ತು ದೇವರಾಜ ಅರಸು ದಾಖಲೆ ಸರಿಗಟ್ಟಿದ್ದೇನೆ. ಆದರೆ, ದೇವರಾಜ ಅರಸು ರಾಜಕಾರಣದ ಸಮಯವೇ ಬೇರೆ, ಇವತ್ತಿನ ಸಮಯವೇ ಬೇರೆ. ಜನರ ಆಶೀರ್ವಾದದಿಂದ ಅಷ್ಟೇ ನಾನು ಇಲ್ಲಿಯ ತನಕ ಬಂದಿದ್ದೇನೆ ಎಂದರು.

ಇಷ್ಟು ವರ್ಷಗಳ ರಾಜಕಾರಣ ತೃಪ್ತಿ ತಂದಿದೆ. ರಾಜಕಾರಣ ಎಂದರೆ ಬಡವರು, ದಲಿತರು, ಹಿಂದುಳಿದವರ ಕೆಲಸ ಕೆಲಸ ಮಾಡಿಕೊಡುವುದು. ಹೆಚ್ಚೆಂದರೆ ಶಾಸಕನಾಗಬೇಕೆಂದು ಅಂದುಕೊಂಡಿದ್ದೆ. ಶಾಸಕನಾದೆ, ಮಂತ್ರಿ, ಉಪಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಹಾಗು ಮುಖ್ಯಮಂತ್ರಿಯೂ ಆದೆ. ಅವಕಾಶಗಳು ಸಿಕ್ಕಿದ್ದರಿಂದ ಇವೆಲ್ಲ ಆಗಲು ಸಾಧ್ಯವಾಯಿತು. ದಾಖಲೆಯ ಬಜೆಟ್ ಕೂಡ ಮಂಡಿಸಿದ್ದೇನೆಂದರು.

ಸಂಕ್ರಾಂತಿ ಹಬ್ಬ ಬಳಿಕ ಸಂಪುಟ ಪುನಾರಚನೆ ಹಾಗು ಕೆ.ಸಿ.ವೇಣುಗೋಪಾಲ್ ಬಗ್ಗೆ ಕೇಳಿದಾಗ, ಅವರು ಮೈಸೂರು ಮಾರ್ಗವಾಗಿ ಬೆಂಗಳೂರಿಗೆ ಹೋಗಿ ದೆಹಲಿಗೆ ಹೋಗುತ್ತಿದ್ದರು, ಹೀಗಾಗಿ ಅವರನ್ನ ಭೇಟಿಯಾಗಿದ್ದೇನೆ ಅಷ್ಟೇ. ಯಾವ ರಾಜಕಾರಣವೂ ಚರ್ಚೆ ಆಗಿಲ್ಲ. ಸಂಪುಟ ಪುನಾರಚನೆ ಬಗ್ಗೆಯೂ ಅವರ ಬಳಿ ಚರ್ಚೆ ಮಾಡಿಲ್ಲ. ಸಂಪುಟ ಪುನಾರಚನೆ ವಿಚಾರದಲ್ಲಿ ಹೈ ಕಮಾಂಡ್ ಯಾವತ್ತು ದೆಹಲಿಗೆ ಕರೆಯುತ್ತದೆ ಅವತ್ತು ದೆಹಲಿಗೆ ಹೋಗುತ್ತೇನೆ ಎಂದರು.

» ಮೂರನೇ ಪುಟದಲ್ಲಿ

### ಪೂರ್ಣಾವಧಿಗೆ ಶುಭ ಕೋರುವೆ: ಡಿ.ಕೆ.ಶಿ.

ಪೂರ್ಣಾವಧಿಗೆ ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯುವ ವಿಶ್ವಾಸವಿದೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರತಿಕ್ರಿಯಿಸಿ, ಒಳ್ಳೆಯದು ಆಗಲಿ. ನಾನು ಅವರಿಗೆ ಶುಭ ಹಾರೈಸುತ್ತೇನೆ. ಶುಭವಾಗಲಿ ಎಂದು ತಿಳಿಸಿದರು.

ಮುಖ್ಯಮಂತ್ರಿ ಹೇಳಿಕೆ ಗೊಂದಲಕ್ಕೆ ಕಾರಣವಾಗಬಹುದೇ ಎಂದು ಕೇಳಿದಾಗ, ಶಿವಕುಮಾರ್, ನೀವು (ಮಾಧ್ಯಮ) ಗೊಂದಲ ಸೃಷ್ಟಿಸುತ್ತಿದ್ದೀರಿ. ನಮಲ್ಲಿ ಗೊಂದಲವಿಲ್ಲ. ನಾನು ಅವರಿಗೆ ಶುಭ ಹಾರೈಸುತ್ತೇನೆ, ಶುಭವಾಗಲಿ ಎಂದರು.

# ಹುಸಿಬಾಂಬ್ ಬೆದರಿಕೆ : ಇ-ಮೇಲ್‌ನಲ್ಲಿ ಬ್ಲ್ಯಾಕ್ ಮೇಲ್

• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಇಟ್ಟಿರುವುದಾಗಿ ಇ-ಮೇಲ್ ಮೂಲಕ ಮಂಗಳವಾರ ಸಂದೇಶ ಬಂದಿದ್ದು, ಪದೇ ಪದೇ ಬರುತ್ತಿರುವ ಇಂತಹ ಬೆದರಿಕೆ ಸಂದೇಶಗಳು ಜಿಲ್ಲಾಡಳಿತ ಹಾಗು ಪೊಲೀಸ್ ಇಲಾಖೆಯ ಕಾರ್ಯಕ್ಷಮತೆ ಕುರಿತು ಗಂಭೀರ ಪ್ರಶ್ನೆ ಹುಟ್ಟಿಸಿದೆ.

ಮಂಗಳವಾರ ಮಧ್ಯಾಹ್ನ 12.44ಕ್ಕೆ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಇಟ್ಟಿರುವುದಾಗಿ ಇ-ಮೇಲ್ ಮೂಲಕ ಹುಸಿ ಸಂದೇಶ ಬಂದಿದೆ. ಸಂದೇಶದಲ್ಲಿ ನ್ಯಾಯಾಲಯದ ಆವರಣದಲ್ಲಿ ಮೂರು ಆರ್‌ಡಿಎಕ್ಸ್ ಬಾಂಬ್‌ಗಳನ್ನು ಸ್ಫೋಟಿಸಲಾಗುವುದು. ಮೊದಲ ಸ್ಫೋಟ ಮಧ್ಯಾಹ್ನ 1.15ಕ್ಕೆ ನಡೆಯಲಿದೆ ಎಂಬ ಬೆದರಿಕೆ ಸಂದೇಶದಿಂದ ನ್ಯಾಯಾಲಯದ ಆವರಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಅದೇ ರೀತಿ ರಾಜ್ಯ ಹಲವು ನ್ಯಾಯಾಲಯಕ್ಕೆ ಹುಸಿ ಬಾಂಬ್ ಬೆದರಿಕೆ ಬಂದಿದೆ.

» ನಾಲ್ಕನೇ ಪುಟದಲ್ಲಿ

### ನ್ಯಾಯಾಲಯ ಸ್ಫೋಟಿಸುವುದಾಗಿ ಸಂದೇಶ

### ತನಿಖೆಗೆ ವಿಶೇಷ ತಂಡ ರಚಿಸಲು ಆಗ್ರಹ

ಮೂರು ಪ್ರಕರಣಗಳು ದಾಖಲಾಗಿದ್ದರೂ, ಈವರೆಗೆ ಇ-ಮೇಲ್‌ಗಳು ಯಾವ ಮೂಲದಿಂದ ಬಂದಿವೆ, ಯಾರನ್ನು ವಿಚಾರಣೆಗೆ ಒಳಪಡಿಸಲಾಗಿದೆ, ಆರೋಪಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂಬ ಕುರಿತು ಯಾವುದೇ ಸ್ಪಷ್ಟ ಮಾಹಿತಿ ಹೊರಬಿದ್ದಿಲ್ಲ. ಇದರಿಂದ ಜಿಲ್ಲಾಡಳಿತ ಹಾಗು ಪೊಲೀಸ್ ಇಲಾಖೆಯ ನಿರ್ಲಕ್ಷ್ಯದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗುತ್ತಿದೆ. ಸರ್ಕಾರ, ಜಿಲ್ಲಾಡಳಿತ ಹಾಗು ಪೊಲೀಸ್ ಇಲಾಖೆ ವಿಶೇಷ ತನಿಖಾ ತಂಡ ರಚಿಸಿ, ಹುಸಿಬಾಂಬ್ ಬೆದರಿಕೆ ನೀಡುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಅರ್ಜಿ ಜೊತೆ ಪೂರಕ ದಾಖಲಾತಿ ಒದಗಿಸಲು ಮನವಿ

• ಪ್ರಜೋದಯ ವರದಿ

**ಆಲೂರು :** ಅರ್ಜಿ ಜೊತೆಯಲ್ಲಿ ದಾಖಲಾತಿಗಳನ್ನು ಅಳವಡಿಸಿ ಕೊಟ್ಟರೆ, ಸಾರ್ವಜನಿಕರ ಸಮಸ್ಯೆಯನ್ನು ಪರಿಹರಿಸಲು ಸಹಕಾರಿಯಾಗಲಿದೆ ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ ಅವರು ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ನಡೆದ 5 ನೇ ಜನ ಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನಸಾಮಾನ್ಯರು ವೈಯಕ್ತಿಕ ಅಥವಾ ಸಾರ್ವಜನಿಕವಾಗಿ ಕಂದಾಯ ಇಲಾಖೆಗೆ ಸಂಬಂಧಿಸಿದ ಅರ್ಜಿಗಳನ್ನು ಕೊಡುವಾಗ ಅಗತ್ಯ ದಾಖಲಾತಿಗಳನ್ನು ನೀಡಿದರೆ, ಪರಿಶೀಲಿಸಿ ಸ್ಥಳದಲ್ಲಿ ಇತ್ಯರ್ಥ ಮಾಡಲು ಅನುಕೂಲವಾಗುತ್ತದೆ. ಇಂದು 10 ಅರ್ಜಿಗಳು ದಾಖಲಾಗಿದ್ದು, ಭೈರಾಪುರ ಗ್ರಾಮ ಪಂಚಾಯಿತಿಗೊಳಪಟ್ಟಂತೆ 6 ಅರ್ಜಿಗಳು ಬಂದಿದ್ದು, ಅದರಲ್ಲಿ ಸರ್ಕಾರಿ ಜಮೀನು ಒತ್ತುವರಿ, ಭೈರಾಪುರಕ್ಕೆ ಸಿಟಿ ಬಸ್ ವ್ಯವಸ್ಥೆ ಕಲ್ಪಿಸಬೇಕು, ರಸ್ತೆ ಸಮಸ್ಯೆ ಬಗೆಹರಿಸಲು ಅರ್ಜಿಗಳು ಬಂದಿವೆ. ಅರ್ಜಿಗಳನ್ನು ಶೀಘ್ರವಾಗಿ ಸಂಬಂಧಿಸಿದ ಇಲಾಖೆಗೆ ರವಾನಿಸಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ನಕಾಶೆಯಲ್ಲಿ ದಾರಿ ಇಲ್ಲದೆ ಜಮೀನಿಗೆ ತಿರುಗಾಡಲು ಖಾಸಗಿ ಜಮೀನಿನಲ್ಲಿ ದಾರಿ ಬಿಡಿಸ ಬೇಕಾದರೆ, ನ್ಯಾಯಾಲಯದ ಆದೇಶವಿದ್ದರೆ ಮಾತ್ರ ಬಿಡಿಸಬಹುದು. ಭೈರಾಪುರದಿಂದ ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ನೂರಾರು ವಿದ್ಯಾರ್ಥಿಗಳು ಪ್ರತಿ ದಿನ ಶಾಲೆ, ಕಾಲೇಜಿಗೆ ತೆರಳುತ್ತಾರೆ. ಸಕಲೇಶಪುರ ಕಡೆಯಿಂದ ಬರುವ ಹಲವು ಬಸ್ಸುಗಳನ್ನು ನಿಲ್ಲಿಸುವುದಿಲ್ಲ. ಹಾಸನದಿಂದ ಆಲೂರಿಗೆ ಬರುವ ಸಿಟಿ ಬಸ್‌ನ್ನು ಭೈರಾಪುರದವರೆಗೆ ವಿಸ್ತರಿಸಿ ವಿದ್ಯಾರ್ಥಿಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಅರ್ಜಿ ಸಲ್ಲಿಸಲಾಯಿತು.

ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಅರ್ಜಿ ರವಾನಿಸಿ ಬಸ್ ಸಂಚರಿಸಲು ಕ್ರಮ ಕೈಗೊಳ್ಳಲು ಕೋರುವುದಾಗಿ ತಹಸೀಲ್ದಾರ್ ತಿಳಿಸಿದರು.

ಸಮದಲೆ ಗ್ರಾಮದ ಸ.ನಂ. 112/9 ಮತ್ತು 112 /10 ರಲ್ಲಿ ಶಾಲಾ ಕಾಲೇಜು ನಡೆಯುತ್ತಿದೆ. ಈ ಜಮೀನಿನ ಸುತ್ತಮುತ್ತ ವಾಟೆಹೊಳೆ ನಾಲೆಯ ಜಾಗ, ಸರ್ಕಾರಿ ಗೋಮಾಳ, ಅರಣ್ಯ ಇಲಾಖೆಗೆ ಸೇರಿದ ಜಾಗಗಳಿವೆ. ಜಂಟಿ ಸರ್ವೆ ಮಾಡಿ ಒತ್ತುವರಿಯಾಗಿರುವ ಜಾಗವನ್ನು ಉಳಿಸಬೇಕೆಂದು ಭೈರಾಪುರ ಗ್ರಾಮದ ಬಿ.ಆರ್.ಶಂಬೇಗೌಡ ಅರ್ಜಿ ಸಲ್ಲಿಸಿದ್ದು, ಜಿಲ್ಲಾಧಿಕಾರಿ ವಿಷಯದ ಬಗ್ಗೆ ಪರಿಶೀಲಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಕೂಡಲೇ ಜಂಟಿ ಸರ್ವೆ ಮಾಡುವಂತೆ ಕೋರಿದರು.

ಬುಧವಾರ ಹಾಸನದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕಾರ್ಯಾಗಾರ ಇರುವುದರಿಂದ, ನಾನು ಸೇರಿ ಎಲ್ಲಾ ಅಧಿಕಾರಿಗಳು ಭಾಗವಹಿಸುತ್ತಿದ್ದೇವೆ. ಸಿಬ್ಬಂದಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆಂದರು. ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಸುಬ್ರಹ್ಮಣ್ಯಶರ್ಮ, ಉಪ ತಹಶೀಲ್ದಾರ್ ಅಂಕೇಗೌಡ,

# ಜೈನ ಧರ್ಮ ಉಳಿವಿಗೆ ಆಚಾರ್ಯರ ಕೊಡುಗೆ ಅಪಾರ

## 5 ನೇ ದಕ್ಷಿಣ ಭಾರತ ಜೈನ ಅರ್ಚಕರ ಸಮ್ಮೇಳನದಲ್ಲಿ ಸರ್ವಾಧ್ಯಕ್ಷ ಡಾ.ಪಾದೂರು ಸುದರ್ಶನ ಕುಮಾರ್ ಇಂದ್ರ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಜೈನ ಧರ್ಮದಲ್ಲಿ ಅರ್ಚಕ ಅಥವಾ ಇಂದ್ರ ಎಂಬ ಪದವು ಕೇವಲ ವೃತ್ತಿಯಲ್ಲ, ಅದೊಂದು ಪವಿತ್ರ ಜವಾಬ್ದಾರಿ. ಜೈನ ಧರ್ಮ ಇಂದು ಜೀವಂತವಾಗಿ ಉಳಿದಿರುವುದಕ್ಕೆ ಕಾರಣ ಕೇವಲ ತೀರ್ಥಂಕರರ ಉಪದೇಶ ಮಾತ್ರವಲ್ಲ, ಅದನ್ನು ಸಂರಕ್ಷಿಸಿ, ಸಂಹಿತೆಗೊಳಿಸಿ, ಜೀವನೋಪಯೋಗಿಯಾಗಿ ರೂಪಿಸಿದ ಆಚಾರ್ಯ ಶಾಸ್ತ್ರಿ ಪರಂಪರೆ. ವಿಶೇಷವಾಗಿ ಜೈನ ಸಿದ್ಧಾಂತಗಳಿಗೆ ಪೂರಕವಾದ ಶಾಶ್ವತ ಕೊಡುಗೆ ನೀಡಿದ ಆಚಾರ್ಯ ಪರಂಪರೆಯನ್ನು ಸ್ಮರಿಸಬೇಕೆಂದು 5ನೇ ದಕ್ಷಿಣ ಭಾರತ ಅರ್ಚಕ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಪಾದೂರು ಸುದರ್ಶನ ಕುಮಾರ್ ಇಂದ್ರ ಅವರು ಹೇಳಿದರು.

ಮಂಗಳವಾರ ಶ್ರವಣ ಬೆಳಗೊಳದಲ್ಲಿ ನಡೆದ 5ನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ಅಹಿಂಸೆ, ಅಪರಿಗ್ರಹ ಮತ್ತು ಅನೇಕಾಂತದ ದಿವ್ಯ ಸಂದೇಶವನ್ನು ಲೋಕಕ್ಕೆ ನೀಡಿದ ತೀರ್ಥಂಕರ ಪರಂಪರೆಯ ಪುಣ್ಯಭೂಮಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿಂದು ನಾವು ದಕ್ಷಿಣ ಭಾರತ ಮಟ್ಟದ ಜೈನ ಅರ್ಚಕ ಸಮ್ಮೇಳನಕ್ಕೆ ಸೇರಿರುವುದು ಅತ್ಯಂತ ಧನ್ಯತೆಯ ವಿಷಯವಾಗಿದೆ. ಜೈನ ಧರ್ಮವು ಸಂಯಮ, ಶ್ರದ್ಧೆ ಮತ್ತು ಶಾಸ್ತ್ರಾನುಸರಣೆಯ ಮೇಲೆ ನಿಂತ ಶಾಶ್ವತ ಧರ್ಮ. ಧರ್ಮದ ಆಚರಣಾತ್ಮಕ ರೂಪವನ್ನು ಸಮಾಜದೊಳಗೆ ಜೀವಂತವಾಗಿರಿಸುವ ಮಹತ್ತರ ಹೊಣೆಗಾರಿಕೆ ಹಾಗೂ ಜೈನ ಧರ್ಮದ ಜೀವಂತ ಹರಿವನ್ನು ಸಮಾಜದೊಳಗೆ ನಿರಂತರವಾಗಿ ಸಾಗಿಸುವಲ್ಲಿ ಪುರೋಹಿತ, ಪಂಡಿತ, ಅರ್ಚಕ, ಉಪಾಧ್ಯಾಯ ಮತ್ತು ಇಂದ್ರ ಇವರ ಮೇಲಿದೆ ಎಂದರು.

ಕರ್ನಾಟಕವು ಜೈನ ಧರ್ಮದ ಆಚಾರ್ಯ-ಶಾಸ್ತ್ರಿ ಪರಂಪರೆಯ ಮಹಾ ಪೀಠಭೂಮಿ ಆಗಿದೆ. ಶ್ರವಣ ಬೆಳಗೊಳದಲ್ಲಿ ಆರಂಭಗೊಂಡು ದಕ್ಷಿಣ ಭಾರತಕ್ಕೆ ವಿಸ್ತರಿಸಿ ಬೆಳೆದು ನಿಂತಿದೆ. ಜೈನ ಆಚಾರ್ಯರು, ಯತಿಗಳು, ಶಾಸ್ತ್ರಿಗಳು ಕರ್ನಾಟಕದ ಧಾರ್ಮಿಕ-ಸಾಂಸ್ಕೃತಿಕ ಇತಿಹಾಸವನ್ನು ರೂಪಿಸಿದ್ದಾರೆ. ಕ್ರಿ.ಪೂ. 3ನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯ ಹಾಗೂ ಭದ್ರಬಾಹು ಆಚಾರ್ಯರು ಶ್ರವಣಬೆಳಗೊಳಕ್ಕೆ ಆಗಮನ ಮಾಡಿದ ನಂತರ ಕರ್ನಾಟಕ ಜೈನ ಧರ್ಮದ ಕೇಂದ್ರವಾಗಿ, ದಿಗಂಬರ ಜೈನ ಆಚಾರ್ಯ ಪರಂಪರೆ ಬೆಳೆದು ಬಂದಿತು ಎಂದು ವಿವರಿಸಿದರು.

ಕುಂದ ಕುಂದಾಚಾರ್ಯರು ಸಮಯಾಸಾರ, ಪ್ರವಚನಸಾರ, ನಿಯಮಾಸಾರ ಕೃತಿಗಳನ್ನು ರಚನೆ ಮಾಡಿ ದಿಗಂಬರ ತತ್ವಶಾಸ್ತ್ರವನ್ನು ಶಿಖರಕ್ಕೆ ಏರಿಸಿದವರು. ಸಮಂತಭದ್ರಾಚಾರ್ಯರು ರತ್ನಕರಂಡಕ ಶ್ರಾವಕಾಚಾರ ಕೃತಿಯ ಮೂಲಕ ಭಕ್ತಿ ಮತ್ತು ತರ್ಕ ಎರಡರ ಸಂಯೋಜನೆ ಮಾಡಿ ಕರ್ನಾಟಕದಲ್ಲಿ ಶ್ರಾವಕ ಸಂಸ್ಕಾರ ಪದ್ಧತಿಗೆ ದಿಕ್ಕನ್ನು ನೀಡಿದವರು. ಹಳಗನ್ನಡದ ಕವಿಗಳು ಹೆಚ್ಚಿನವರು ಜೈನ ಪುರೋಹಿತ ವರ್ಗದಿಂದ ಬಂದವರು. ಇವರು ಕೇವಲ ಪೂಜಾ ವಿಧಿ-ವಿಧಾನಗಳಲ್ಲದೆ ಸಂಸ್ಕೃತ ಮತ್ತು ಪ್ರಾಕೃತದಲ್ಲಿದ್ದ ಆಗಮಗಳನ್ನು ಕನ್ನಡಕ್ಕೆ ಸರಳೀಕರಿಸಿ ಜನ ಸಾಮಾನ್ಯರಿಗೆ ತಲುಪಿಸಿದರು. ಬಸದಿಗಳಲ್ಲಿರುವ ಅಮೂಲ್ಯ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬಂದ ಕೀರ್ತಿ ನಮ್ಮ ಅರ್ಚಕ ಪರಂಪರೆಗೆ ಸಲ್ಲುತ್ತದೆ. ಅದನ್ನು ಅರಿತು, ಅನುಸರಿಸಿ, ಮುಂದಿನ ಪೀಳಿಗೆಗೆ ಹರಿಸುವುದು ಮುನಿ ಮಹಾರಾಜರ, ಭಟ್ಟಾರಕರ, ವಿದ್ವಾಂಸರ, ಪಂಡಿತರ ಹಾಗೂ ಅರ್ಚಕ ಶಾಸ್ತ್ರಿಗಳ ಧರ್ಮವಾಗಿದೆ ಎಂದು ತಿಳಿಸಿದರು.

ಪುರಾಣಗಳ ಪ್ರಕಾರ, ಭಗವಾನ್ ಆದಿನಾಥರ ಕಾಲದಲ್ಲಿಯೇ ಸಮಾಜದ ಶಿಸ್ತು ಮತ್ತು ಧಾರ್ಮಿಕ ವಿಧಿಗಳನ್ನು ನಡೆಸಿಕೊಡಲು ಕುಲಕರರ ವ್ಯವಸ್ಥೆ ಇತ್ತು. ಇಂದ್ರನ ಸಾಂಕೇತಿಕತೆಯಾಗಿ, ಪಂಚಕಲ್ಯಾಣಕಗಳಲ್ಲಿ ಸೌಧರ್ಮೇಂದ್ರನು ಹೇಗೆ ತೀರ್ಥಂಕರರ ಸೇವೆಯನ್ನು ಮಾಡುತ್ತಾನೋ, ಹಾಗೆಯೇ ಭೂಮಿಯ ಮೇಲೆ ಜಿನಾಲಯಗಳಲ್ಲಿ ದೇವರ ಪೂಜೆ ಮಾಡುವ ಅರ್ಚಕರನ್ನು ಇಂದ್ರ ಎಂದು ಕರೆಯಲಾಗುತ್ತದೆ. ಸಮಾಜಕ್ಕೆ ಹಿತವನ್ನು ಬಯಸುವವನೇ ಪುರೋಹಿತ. ಜಿನವಾಣಿಯನ್ನು ಅಭ್ಯಾಸ ಮಾಡಿ ಶ್ರಾವಕರಿಗೆ ಬೋಧಿಸುವವರು ಉಪಾಧ್ಯಾಯ ಅಥವಾ ಪಂಡಿತ. ಮುನಿಗಳು ಆತ್ಮ ಕಲ್ಯಾಣಕ್ಕಾಗಿ ತಪಸ್ಸು ಮಾಡಿದರೆ,

» ನಾಲ್ಕನೇ ಪುಟದಲ್ಲಿ

# ಶಿಕ್ಷಣ-ಆರೋಗ್ಯ ದೇಶದ ಅಭಿವೃದ್ಧಿಗೆ ಮೂಲಾಧಾರ

## ಅಂಗನವಾಡಿ ಕೇಂದ್ರ ಉದ್ಘಾಟಿಸಿ ಶಾಸಕ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

**ಹಾಸನ:** ಶಿಕ್ಷಣ ಮತ್ತು ಆರೋಗ್ಯ ದೇಶದ ಅಭಿವೃದ್ಧಿಗೆ ಮೂಲಾಧಾರ. ಶಿಕ್ಷಣವು ಜ್ಞಾನ, ಕೌಶಲ್ಯ ನೀಡಿದರೆ, ಆರೋಗ್ಯವು ಆ ಕೌಶಲ್ಯಗಳನ್ನು ಬಳಸಿಕೊಳ್ಳಲು ಶಕ್ತಿ ನೀಡುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ತಾಲ್ಲೂಕಿನ ಕಟ್ಟಾಯ ಹೋಬಳಿಯ ಅಂಕಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸತ್ತಿಗರಹಳ್ಳಿ ಕೊಪ್ಪಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ನರೇಗಾ ಯೋಜನೆಯಡಿ 13 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಅಂಗನವಾಡಿ ಕೇಂದ್ರ ಉದ್ಘಾಟನೆ ಹಾಗು ರಾಷ್ಟ್ರೀಯ ಪೋಷಣಾ ಮಾಸಾಚರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯ ಮತ್ತು ಶಿಕ್ಷಣವು ಉತ್ತಮ ಜೀವನ ಶೈಲಿ ಹಾಗು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಆರೋಗ್ಯಕರ ದೇಹ ಮತ್ತು ಮನಸ್ಸಿನಿಂದ ಮಾತ್ರ ಶಿಕ್ಷಣದ ಲಾಭ ಪಡೆಯಲು ಮತ್ತು ಜೀವನದಲ್ಲಿ 

## ಮೊಬೈಲ್

ಕೈಯಲ್ಲಿ ಹಿಡಿದಿರುವ ನನ್ನೊಳಗೆ ಬಂದು ಬದುಕಿನ ಪಾಠ ಮಾಡುವವರು ಸಾವಿರ ಜನ, ಹೇಗೆ ಬದುಕೆ ಬೇಕು ಅಂತ ಹೇಳಿಕೊಡುತ್ತಾರೆ, ಬೆಳಗ್ಗೆ ಏಳುವುದನ್ನು ಹೇಳಿಕೊಡುತ್ತಾರೆ ಯಾವ ರೀತಿಯ ಅಡಿಗೆ ಮಾಡಬೇಕು ಅಂತ ಹೇಳಿಕೊಡುತ್ತಾರೆ ಹೆಚ್ಚಾಗಿ ದುಡ್ಡು ಮಾಡೋದು ಹೇಗೆ ಅನ್ನೋದನ್ನ ಹೇಳ್ಕೊಡ್ತಾರೆ ಪ್ರೀತಿ ಬಗ್ಗೆ ಮನಸ್ತಾಪಗಳ ಬಗ್ಗೆ ಕಳೆದುಕೊಂಡದ್ದನ್ನ ಬಗ್ಗೆ ಅನುಭವಿಸಿದ ಬಗ್ಗೆ ನೋವು ನಲಿವುಗಳೆಲ್ಲವನ್ನ ಅಲ್ಲಿ ಹಂಚಿಕೊಳ್ಳುತ್ತಾರೆ ಕೆಲವರು ಬಟ್ಟೆ ಬಿಚ್ಚುತ್ತಾರೆ ಬಟ್ಟೆ ಹಾಕಿಕೊಳ್ಳುತ್ತಾರೆ ಅವರವರ ಇಷ್ಟಕ್ಕೆ ನನ್ನನ್ನು ಬಳಸಿಕೊಳ್ಳುತ್ತಾರೆ ಹಾಗೆ ಬಳಸಿಕೊಂಡು ಕೆಲವರು ಬೆಳೆದಿದ್ದಾರೆ ಕೆಲವರು ಬೆಳೆಸಿದ್ದಾರೆ ಕೆಲವರು ಬೆಳೆತೇವೇ ಅಂತ ಅಂದುಕೊಂಡಿದ್ದಾರೆ ಹಲವು ಮಂದಿ ಮುಳುಗಿ ಹೋಗಿದ್ದಾರೆ, ಮುಳುಗಿದವರ ಬಗ್ಗೆ ಮಾತನಾಡುವವರೇ ಇಲ್ಲ ಎಲ್ಲರಿಗೂ ಬೆಳೆಯುವ ಆಸೆ ಆದ್ರೆ ಕೊನೆಗೆಲ್ಲಾದರೂ ಒಂದು ಕಡೆ ಮುಳುಗುವಾಗ ತಪ್ಪಲ್ಲವೂ ನನ್ನದೇ ಅಂತ ನನ್ನ ಮೇಲೆ ಹೊತ್ತು ಹಾಕುತ್ತಾರೆ. ಎಲ್ಲವನ್ನ ಕೇಳಿಕೊಂಡು ಸುಮ್ಮನಿದ್ದೇನೆ ನಾನು ಬರಿ ಯಂತ್ರವಷ್ಟೇ, ನನ್ನಲ್ಲೇನೋ ಬದಲಾವಣೆಗಳಾಗುವುದಿಲ್ಲ ನೀವು ನನ್ನನ್ನು ಬಳಸುವ ರೀತಿಯಿಂದಲಷ್ಟೇ ಬದಲಾವಣೆಗಳಾಗುತ್ತವೆ. ಕಾರಣ ನೀವು. ಅನುಭವಿಸುವವರು ನೀವು ನಾನಲ್ಲ ಅದಕ್ಕೆ ಮತ್ತೆ ಹೇಳುತ್ತಿದ್ದೇನೆ ನಾನವನಲ್ಲ.

– **ಧೀರಜ್** ಬೆಳ್ಳಾರೆ

## ಎಲ್ಲವೂ ಆರೋಗ್ಯಕರವಾಗಿರಲಿ... ಕೈಗೊಂಬ ಕಾಯಕದಲ್ಲಿ ಶ್ರದ್ಧೆಯಿರಲಿ....

ಕ್ಯಾಲೆಂಡರ್ ದಶಂಬರ 31 ತೋರಿಸುತ್ತಿರಬಹುದು. ಆದರೆ ನಮಗೆಲ್ಲ ಹೊಸವರುಷ ಇದಲ್ಲ. ಸಾಮಾನ್ಯವಾಗಿ ಮಾತಿಗೆ ಹೊಸವರುಷ ಹರುಷ ತರಲಿ ಹೇಳುವುದು ರೂಢಿ. ದಶಂಬರ 31 ಎನ್ನುವುದು ಆ ತಿಂಗಳ 2025 ವರ್ಷದ ಕೊನೇ ದಿನ. ಈ ವರ್ಷದುದ್ದಕ್ಕೂ ನಾವೇನು ಮಾಡಿದ್ದೇವೆ? ಏನು ಮಾಡಬೇಕಾಗಿತ್ತು, ಮುಂದೇನು ನಮ್ಮ ನಡೆ? ಎನ್ನುವುದರ ಅವಲೋಕನ ಮಾಡಿ ಮುಂದುವರಿಯೋಣ.

ಶೀಲಂ ಶೌರ್ಯಮನಾಲಸ್ಯಂ ಪಾಂಡಿತ್ಯಂ ಮಿತ್ರಸಂಗ್ರಹ:/ ಅಚೋರ ಹರಣೀಯಾನಿ ಪಂಚೈತಾನ್ಯಕ್ಷಯೋ ನಿಧಿ:// ಶುದ್ಧ ಚಾರಿತ್ರ್ಯ, ಪರಾಕ್ರಮ, ಚುರುಕುತನ, ವಿದ್ವತ್ತು, ಸ್ನೇಹಿತರ ಬಳಗದ ಕೂಟ ಈ ಐದನ್ನು ಕದಿಯಲು ಆಗದು. ಮನುಜನ ಸಂಪತ್ತಿದು. ಇವುಗಳನ್ನು ಗಳಿಸಿ ಉಳಿಸುವ ಜವಾಬ್ದಾರಿ ನಮ್ಮದು. ಕಳೆದ ದಿನಗಳು ಹೋಗಲಿ. ಮುಂದೆ ಏನು ಮಾಡಬೇಕೆಂದು ಯೋಚಿಸಿ, ಹೆಜ್ಜೆಯೂರೋಣ. ಜನಿಸಿ ಬಂದ ಬಳಿಕ ಏನಾದರೂ ಗುರುತನ್ನು ಉಳಿಸುವಂತಿರಬೇಕು ನಮ್ಮ ನಡೆನುಡಿ. ಅದು ಯೋಗ್ಯ ರೀತಿಯಲ್ಲಿರುವಂತೆ ಪ್ರಯತ್ನಿಸೋಣ. ಬಂದ, ಉಂಡ, ಹೋದ ಆಗ ಬಾರದು. ಧರ್ಮಕ್ಷೇತ್ರ ನಮ್ಮೀ ನೆಲ. ಆದಷ್ಟೂ ಧರ್ಮಕರ್ಮಗಳಲ್ಲೇ ಸಾಗಬೇಕು, ಮಕ್ಕಳಿಗೂ ಇದನ್ನು ತಿಳಿಸಿಹೇಳುವುದು ಹಿರಿಯರ ಕರ್ತವ್ಯ. ಈ ನೆಲದ ಮಣ್ಣಿನ ಸೊಗಡೇ ಹಾಗೆ. ನಮ್ಮ ಶ್ರೇಯಸ್ಸಿಗಾಗಿ, ಅನ್ಯರಿಗೆ ತೊಂದರೆಯಾಗದಂತೆ, ಅವರನ್ನೂ ಸೇರಿಸಿಕೊಂಡು ಖುಷಿಯಾಗಿ ಬದುಕಲು ಕಲಿಯೋಣ. ಹಾಡು-ಕುಣಿತ-ಉತ್ಸವ ಆಚರಣೆಯಿಂದ ಬೇರೆಯವರಿಗೆ, ಮನೆಯ ಸದಸ್ಯರಿಗೆ ತೊಂದರೆಯಾಗಬಾರದು. ಕೆಲವೊಂದು ಸಲ ಮಿತಿಮೀರಿದಾಗ ಉಸಿರೇ ನಿಂತದ್ದು ಇದೆ. ಪ್ರಾಣ ಮುಖ್ಯ, ಅದೇ ಹೋದರೆ ಮತ್ತೇನಿದೆ? ಕವಿರತ್ನ ಕಾಳಿದಾಸ ಹೇಳಿದ ಒಂದು ಉಕ್ತಿ ಉತ್ಸವಪ್ರಿಯಾ: ಖಲು ಮನುಷ್ಯಾ: ಎಲ್ಲಿ ಸಿಗುತ್ತದೆ ಎಂದು ಕಾಯುವುದೇ ಅಭ್ಯಾಸವಾಗಿಬಿಟ್ಟಿದೆ. ನಾವು ಮನುಷ್ಯರು ಉತ್ಸವಪ್ರಿಯರು, ಸಿಕ್ಕಿದ್ದೇ ನೆಪವಾಗಿ ಗೌಜಿ, ಗದ್ದಲ, ಆಡಂಬರ ಮಾಡ್ತೇವೆ. ಎಲ್ಲವೂ ಆರೋಗ್ಯಕರ ವಾಗಿರಲಿ. ಕೈಗೊಂಬ ಕಾಯಕದಲ್ಲಿ ಶ್ರದ್ಧೆಯಿರಲಿ.

– **ರತ್ನಾ ಕೆ ಭಟ್** ಬೆಂಗಳೂರು

## 07-01-2026 ದಿನ ಭವಿಷ್ಯ

**ಮೇಷ:** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ದುಂದುಗಾರಿಕೆ ಮತ್ತು ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ. ಹಳೆಯ ಸಂಬಂಧಿಗಳು ಅವಿವೇಕದ ಬೇಡಿಕೆಗಳನ್ನು ಮಾಡುವ ಸಾಧ್ಯತೆಯಿದೆ.

**ವೃಷಭ:** ಒಬ್ಬ ಸ್ನೇಹಿತ ನಿಮ್ಮ ಮುಕ್ತ ಮನಸ್ಸು ಮತ್ತು ಸಹಿಷ್ಣುತೆಯ ಪರಮಾವಧಿಯನ್ನು ಪರೀಕ್ಷಿಸಬಹುದು. ನೀವು ನಿಮ್ಮ ಮೌಲ್ಯಗಳೊಂದಿಗೆ ರಾಜಿಯಾಗದಿರುವಂತೆ ಮತ್ತು ಸಕಾರಣವಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಎಚ್ಚರಿಕೆ ವಹಿಸಬೇಕು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು.

**ಮಿಥುನ:** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥ ಮಾಡಿಕೊಂಡು ನಡೆಯಿರಿ ಕುಟುಂಬ ಮತ್ತು ಸ್ನೇಹಿತರೊಂದಿಗೆ ನೀವು ಮೊದಲ ನೋಟದಲ್ಲೇ ಪ್ರೀತಿಯಲ್ಲಿ ಬೀಳಬಹುದು.

**ಕರ್ಕಾಟಕ:** ನಿಮ್ಮ ಬಲವಾದ ಧೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇದು ನಿಮಗೆ ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ. ನಿಮ್ಮ ಜೊತೆಗಿರುವ ಯಾರಾದರೂ ನಿಮ್ಮ ಇತ್ತೀಚಿನ ಕ್ರಮಗಳಿಂದ ಕಿರಿಕಿರಿಗೊಳ್ಳಬಹುದು.

**ಸಿಂಹ:** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಇಂದು ಹಣ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತಿರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ ನಿಮ್ಮ ಮಕ್ಕಳ ಚಿಂತೆಗಳನ್ನು ಬೆಂಬಲಿಸುವುದು ಅಗತ್ಯ.. ನಿಮ್ಮ ಪ್ರೇಮಿ ಅಥವಾ ಪ್ರೇಮಿಕ ಇಂದು ತುಂಬಾ ಕೋಪದಲ್ಲಿ ಕಾಣಬಹುದು.

**ಕನ್ಯಾ:** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ-ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ. ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ನೀವು ಕೆಲಸದಲ್ಲಿ ಸಂಭವಿಸುವ ಬದಲಾವಣೆಗಳಿಂದ ಪ್ರಯೋಜನ ಪಡೆಯುತ್ತೀರಿ.

**ತುಲಾ:** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪರ ಅಥವಾ ಉದ್ಯೋಗದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ.

**ವೃಶ್ಚಿಕ:** ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನೀವು ಭಾವಿಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ. ನಿಮ್ಮ ಪ್ರೀತಿ ಒಂದು ಹೊಸ ಎತ್ತರವನ್ನು ತಲುಪುತ್ತದೆ. ಈ ದಿನವು ನಿಮ್ಮ ಪ್ರೀತಿಪಾತ್ರರ ನಗುವಿನಿಂದ ಪ್ರಾರಂಭವಾಗುತ್ತದೆ.

**ಧನು:** ನಿಮ್ಮ ಕುಟುಂಬದ ನೀವು ಕಿರಿಕಿರಿ ಸಾಧ್ಯವಾಯಿತು ಇದು ನಿಮ್ಮಿಂದ ಸಾಕಷ್ಟು ನಿರೀಕ್ಷಿಸುತ್ತದೆ. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ. ನಿಮ್ಮ ಮನೆಯಲ್ಲಿ ಸಾಮರಸ್ಯ ತರಲು ನಿಕಟ ಸಹಕಾರದೊಂದಿಗೆ ಕೆಲಸ ಮಾಡಬೇಕು. ಸೆಕ್ಸ್ ಅಪೀಲ್ ಬೇಕಾದ ಫಲಿತಾಂಶವನ್ನು ನೀಡುತ್ತದೆ ಇದು ಕೆಲಸದಲ್ಲಿ ನಿಮ್ಮ ದಿನವಾಗಿದೆ!

**ಮಕರ:** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು. ಇದು ನಿಮ್ಮ ಹಣಕಾಸಿನ ಸ್ಥಿತಿಯನ್ನು ಹದಗೆಡಿಸುತ್ತದೆ ಆದರೆ ಸಂಬಂಧವನ್ನು ಬಲಪಡಿಸುತ್ತದೆ. ಕುಟುಂಬದ ರಹಸ್ಯ ಸುದ್ದಿ ನಿಮಗೆ ಅಚ್ಚರಿ ನೀಡಬಹುದು.

**ಕುಂಭ:** ನಿಮ್ಮ ದಿಟ್ಟ ಮತ್ತು ನಿರ್ಭಯ ಅಭಿಪ್ರಾಯಗಳು ನಿಮ್ಮ ಸ್ನೇಹಿತನ ಆತ್ಮಗೌರವವನ್ನು ಹಾನಿ ಮಾಡಬಹುದು. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು. ಅವರಿಗೆ ಹಣವನ್ನು ಹಿಂದಿರುಗಿಸಿ ನೀವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬಹುದು. ಸಾಲ ಪಡೆಯುವುದನ್ನು ತಪ್ಪಿಸಲು ನಿಮಗೆ ಸೂಚಿಸಲಾಗಿದೆ.

**ಮೀನ:** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಆತಂಕಗಳನ್ನು ಉಂಟುಮಾಡುತ್ತಾರೆ.

# ಟೀಕೆಗಳನ್ನು ಮೀರಿ ಗೆದ್ದ ಪಂಚ ಗ್ಯಾರಂಟಿ

**» ಪಂಚಗ್ಯಾರಂಟಿ ಯೋಜನೆಯ ಒಂದು ರುಪಾಯಿ ಸಹ ದುರುಪಯೋಗವಾಗಬಾರದು ಎನ್ನುವ ಕಾರಣಕ್ಕೆ ಡಿಬಿಟಿ ಮಾಡಿದ್ದು ಅವರ ದೂರಾಲೋಚನೆಗೆ ಸಾಕ್ಷಿ ಎಂದರೆ ತಪ್ಪಾಗುವುದಿಲ್ಲ. ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸರಕಾರ ಅಧಿಕಾರಕ್ಕೆ ಬಂದ ಎರಡುವರೆ ವರ್ಷದೊಳಗೆ ಗ್ಯಾರಂಟಿಗೆ ಲಕ್ಷ ಕೋಟಿ ರು. ಗೂ ಅಧಿಕ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಆದರೆ ಇಡೀ ಬಜೆಟ್‌ನ್ನು ಕೇವಲ ಗ್ಯಾರಂಟಿಗೆ ಮೀಸಲಿಡದೇ, ಅಭಿವೃದ್ಧಿ ಕಾರ್ಯಗಳಿಗೂ ಹೆಚ್ಚಿನ ಒತ್ತು ನೀಡುವ ಕಾರ್ಯವನ್ನು ಮಾಡುತ್ತಾ ಬಂದಿದೆ.**

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಘೋಷಿಸಿದ್ದ ಪಂಚಗ್ಯಾರಂಟಿ ಯೋಜನೆ ಜಾರಿಗೆ ಸಾಧ್ಯವೇ ಇಲ್ಲ ಎಂದು ಮುಗುಮುರಿದವರೇ ಮುಂದೆ ಈ ಯೋಜನೆಗಳನ್ನು ನಕಲು ಮಾಡುವಂತೆ ಮಾಡಿದ್ದು ಕರ್ನಾಟಕದ ಕಾಂಗ್ರೆಸ್ ಸರಕಾರದ ಕಳೆದ ಎರಡುವರೆ ವರ್ಷದ ಬಹುದೊಡ್ಡ ಸಾಧನೆ. ಬಜೆಟ್‌ನ ಬಹುದೊಡ್ಡ ಭಾಗವೇ ಈ ಯೋಜನೆಗಳಿಗೆ ಮೀಸಲಿಡಬೇಕಾದ ಅನಿವಾರ್ಯತೆಯ ಹೊರತಾಗಿಯೂ ಅಧಿಕಾರಕ್ಕೆ ಬಂದ ಆರೇ ತಿಂಗಳಿನೊಳಗೆ ಐದು ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದು ಇತಿಹಾಸ.

ಈ ಇತಿಹಾಸ ಸೃಷ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಮುತ್ಸದ್ದಿತನ, ಜನಪರ ಕಾಳಜಿಯ ಜತೆಜತೆಗೆ ಆಡಳಿತ ಹಾಗೂ ಆರ್ಥಿಕ ವಿಷಯದಲ್ಲಿ ಸಿದ್ದರಾಮಯ್ಯ ಅವರಿಗೆ ಇರುವ ಹಿಡಿತ ಪ್ರಮುಖ ಪಾತ್ರವಹಿಸಿತ್ತು. ಪ್ರಮಾಣ ವಚನ ಸ್ವೀಕರಿಸಿದ ದಿನವೇ ಐದು ಯೋಜನೆಗಳನ್ನು ಜಾರಿಗೊಳಿಸುವ ತಾತ್ವಿಕ ಒಪ್ಪಿಗೆ ಪಡೆದ ಅವರು, ಮುಂದಿನ ಆರು ತಿಂಗಳಿನೊಳಗೆ ಎಲ್ಲ ಯೋಜನೆಗಳು ಜನರ ಮನೆ-ಮನ ತಲುಪುವಂತೆ ನೋಡಿಕೊಂಡರು.

ಪಂಚಗ್ಯಾರಂಟಿ ಯೋಜನೆಯ ಒಂದು ರುಪಾಯಿ ಸಹ ದುರುಪಯೋಗವಾಗಬಾರದು ಎನ್ನುವ ಕಾರಣಕ್ಕೆ ಡಿಬಿಟಿ ಮಾಡಿದ್ದು ಅವರ ದೂರಾಲೋಚನೆಗೆ ಸಾಕ್ಷಿ ಎಂದರೆ ತಪ್ಪಾಗುವುದಿಲ್ಲ. ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸರಕಾರ ಅಧಿಕಾರಕ್ಕೆ ಬಂದ ಎರಡುವರೆ ವರ್ಷ ದೊಳಗೆ ಗ್ಯಾರಂಟಿಗೆ ಲಕ್ಷ ಕೋಟಿ ರು. ಗೂ ಅಧಿಕ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಆದರೆ ಇಡೀ ಬಜೆಟ್ ನ್ನು ಕೇವಲ ಗ್ಯಾರಂಟಿಗೆ ಮೀಸಲಿಡದೇ, ಅಭಿವೃದ್ಧಿ ಕಾರ್ಯಗಳಿಗೂ ಹೆಚ್ಚಿನ ಒತ್ತು ನೀಡುವ ಕಾರ್ಯವನ್ನು ಮಾಡುತ್ತಾ ಬಂದಿದೆ.

ಇದರೊಂದಿಗೆ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಬ್ಬು ದರ ನಿಗದಿ, ಮೆಕ್ಕೆಜೋಳ ದರ ನಿಗದಿ ಸಂಬಂಧ ಕೇಂದ್ರದ ಮೇಲೆ ನಿರಂತರ ಹೋರಾಟ ನಡೆಸುವ ಮೂಲಕ ರಾಜ್ಯದ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ರೂಪಿಸಿದೆ.

ನೀರಾವರಿಗೆ ಭರ್ಜರಿ ಯೋಜನೆ: ರಾಜ್ಯ ಸರಕಾರ ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಶೀಘ್ರ ಪೂರೈಸಲು ಹಲವು ಕ್ರಮವಹಿಸಿದೆ. ಕೇಂದ್ರ ಸರಕಾರದ ಅಸಹಕಾರದ ಹೊರತಾಗಿಯೂ ಹಲವು ಯೋಜನೆಗಳನ್ನು ರೂಪಿಸಿ, 56000 ಕೋಟಿ ರು.ಗಳನ್ನು ನೀರಾವರಿಗೆ ವೆಚ್ಚ ಮಾಡಲಾಗಿದೆ. ಈಗಾಗಲೇ ಮಹದಾಯಿ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರು, ಪರಿಸರ ತೀರುವಳಿ ಸಿಕ್ಕಿಲ್ಲ.

ಇನ್ನು ಮಹದಾಯಿ ಯೋಜನೆಗೆ ಡಿಪಿಆರ್ ಅನ್ನು ಸರಕಾರ ಸಿದ್ಧಪಡಿಸಿದ್ದರೂ, ಕೇಂದ್ರದ ಅನುಮತಿ ದೊರೆತಿಲ್ಲ. ಇದಿಷ್ಟೇ ಅಲ್ಲದೇ ಕೇಂದ್ರ ಸರಕಾರದಿಂದ ಬರಬೇಕಿರುವ ಅನುದಾನ ಬಾಕಿಯಿದ್ದರೂ, ರಾಜ್ಯ ಸರಕಾರ ತನ್ನದೇ ಸಂಪನ್ಮೂಲವನ್ನು ಬಳಸಿಕೊಂಡು ಜನಪರ ಸೇವೆಯನ್ನು ಮಾಡಿಕೊಂಡು ಬಂದಿದೆ.

ದೇಶಕ್ಕೆ ಮಾದರಿಯಾದ ಕರ್ನಾಟಕ ಮಾಡೆಲ್: ಆರಂಭದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿಗೊಂಡ ಸಮಯದಲ್ಲಿ ಬಹುತೇಕರು ಈ ಯೋಜನೆಗಳನ್ನು ಯಶಸ್ವಿಯಾಗುವುದಿಲ್ಲ ಎಂದಿದ್ದರು. ಆದರೆ ಕರ್ನಾಟಕ ಸರಕಾರ ಯಶಸ್ವಿಯಾಗಿ ಜಾರಿಗೊಳಿಸಿದ ಬಳಿಕ ಕಾಂಗ್ರೆಸ್ ಮಾತ್ರವಲ್ಲದೇ, ಇತರೆ ಪಕ್ಷಗಳು ಕಾಂಗ್ರೆಸ್ ಹಾದಿಯನ್ನು ತುಳಿದಿವೆ. ಸ್ವತಃ ಬಿಜೆಪಿ ಲೋಕ ಸಭಾ ಹಾಗೂ ವಿಧಾನ ಸಭಾ ಚುನಾವಣೆಗಳಲ್ಲಿ ಕರ್ನಾಟಕದ ಮಾದರಿಯನ್ನು ನಕಲು ಮಾಡುವ ಮೂಲಕ ಕರ್ನಾಟಕ ಮಾಡೆಲ್ ಅನ್ನು ಒಪ್ಪಿಕೊಂಡಿದೆ.




### ಕಳೆದ ಬಜೆಟ್

- ಕಳೆದ ಬಜೆಟ್‌ನಲ್ಲಿ ಘೋಷಿಸಿದ ಅಭಿವೃದ್ಧಿಪರ ಘೋಷಣೆ
- ರಾಜ್ಯಾದ್ಯಂತ 3 ಲಕ್ಷ ಮನೆಗಳ ನಿರ್ಮಾಣದ ಗುರಿ. ರಾಜ್ಯದಲ್ಲಿ ವಸತಿ ರಹಿತರ ಸಂಖ್ಯೆಯನ್ನು ಗುರುತಿಸಲು ಸಮೀಕ್ಷೆ.
- 80 ವರ್ಷ ಮೇಲ್ಪಟ್ಟ ವಯಸ್ಸಿನವರೇ ಇರುವ ಮನೆಗಳಿಗೆ ಆಹಾರ ಧಾನ್ಯ ವಿತರಣೆ ಅನ್ನ ಸುವಿಧಾ ಹೋಮ್ ಡೆಲಿವರಿ ಆಪ್
- ಸಿರಿಧಾನ್ಯಗಳ ಉತ್ಪಾದನೆಗೆ ಹೊಸ ಯೋಜನೆ ರೂಪಿಸಿದ್ದು ನಮ್ಮ ಮಿಲೆಟ್ ಯೋಜನೆ
- ಕಂದಾಯ ಭೂಮಿ, ಸರ್ವೆ ಮತ್ತು ನೋಂದಣಿ ದಾಖಲೆಗಳ ಗಣಕೀಕರಣಕ್ಕಾಗಿ ಭೂ ಸುರಕ್ಷಾ ಯೋಜನೆ ಜಾರಿ.
- ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗ್ರಾಚ್ಯುಟಿ. ಅಂಗನವಾಡಿ ಚಟುವಟಿಕೆಗಳಿಗೆ 90 ಕೋಟಿ ರೂ. ವೆಚ್ಚದಲ್ಲಿ ಕಾರ್ಯಕರ್ತೆಯರು, ಮೇಲ್ವಿಚಾರಕಿಯರಿಗೆ 75938 ಸ್ಮಾರ್ಟ್ ಫೋನ್.
- ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗೆ 20 ಕೋಟಿ ರು. ವೆಚ್ಚದಲ್ಲಿ ಪ್ರತಿಜಿಯಲ್ಲಿಯೂ ಡೇ-ಕೇರ್ ಕಿಮೋಥೆರಪಿ ಕೇಂದ್ರ
- ರಾಜ್ಯದ 20 ಸಾವಿರ ವಿಜ್ಞಾನ ವಿದ್ಯಾರ್ಥಿಗಳಿಗೆ ನೀಟ್, ಜೆಇಇ, ಸಿಇಟಿ ತರಬೇತಿಗಾಗಿ 10 ಕೋಟಿ ರು. ಸುಳ್ಳು ಸುದ್ದಿ ತಡೆಗೆ ಸತ್ಯ ಶೋಧನಾ ತಂಡ, ವಿಶೇಷ ಕೋಶ ರಚನೆ.
- ಡೀಪ್ ಫೇಕ್ ಹಾಗೂ ಸೈಬರ್ ಕ್ರೈಂ ತಡೆಗೆ 43 ಹೊಸ ಠಾಣೆ.
- ಎಲ್ಲ ಸರಕಾರಿ ಶಾಲೆಗಳು, ಕಾಲೇಜುಗಳಿಗೆ ಉಚಿತ ವಿದ್ಯುತ್ ಪೂರೈಕೆ.
- 7.50 ಕೋ

# ಯುವಕರು ಶಿಸ್ತು, ಆತ್ಮಸ್ಥೈರ್ಯ ಮೈಗೂಡಿಸಿಕೊಳ್ಳಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ಯುವಕರು ವೈಯಕ್ತಿಕ ಜೀವನದಲ್ಲಿ ಶಿಸ್ತು, ಸಮಯಪಾಲನೆ ಮತ್ತು ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡಾಗ ಮಾತ್ರ ಸಮಾಜ ಸೇವೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಸಾಧ್ಯ. ವಿಪತ್ತು ನಿರ್ವಹಣೆಯಂತಹ ಮಹತ್ವದ ಕಾರ್ಯಗಳಿಗೆ ಧೈರ್ಯಶಾಲಿ ಹಾಗೂ ತರಬೇತಿ ಪಡೆದ ಸ್ವಯಂ ಸೇವಕರ ಅಗತ್ಯ ಹೆಚ್ಚುತ್ತಿದೆ ಎಂದು ಉಪ ವಿಭಾಗಾಧಿಕಾರಿ ಡಾ. ವಿ.ಮಂಜುನಾಥ್ ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ (ಎಸ್‌ಕೆಡಿಆರ್‌ಡಿಪಿ) ವತಿಯಿಂದ ತಾಲ್ಲೂಕಿನ ಸವಿತ ಸಮಾಜದ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದ್ದ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಐದನೇ ವರ್ಷದ ಪೂರೈಕೆ ಹಾಗೂ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶೌರ್ಯ ಸ್ವಯಂಸೇವಕರಿಗೆ ಇರುವ ಜವಾಬ್ದಾರಿ ಮತ್ತು ಅವಕಾಶಗಳ ಕುರಿತು ಮಾಹಿತಿ ನೀಡಿದರಲ್ಲದೆ, ತುರ್ತು ಸಂದರ್ಭಗಳಲ್ಲಿ ಜೀವ ರಕ್ಷಣೆ, ಪ್ರಕೃತಿ ವಿಕೋಪ, ಅಪಘಾತ, ಬೆಂಕಿ ಅವಘಡ, ನೆರೆ ಹಾವಳಿ, ಭೂಕುಸಿತದಂತಹ ಸಂದರ್ಭಗಳಲ್ಲಿ ಸ್ಥಳೀಯ ಆಡಳಿತದೊಂದಿಗೆ ಕೈ ಜೋಡಿಸಿ ಕಾರ್ಯನಿರ್ವಹಿಸುವುದೇ ಈ ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ಮಾನವೀಯತೆ, ದೇಶ ಪ್ರೇಮ ಮತ್ತು ಆರೋಗ್ಯ ಕಾಳಜಿಯಂತಹ ಮೌಲ್ಯಗಳನ್ನು ಸ್ವಯಂ ಸೇವಕರು ತಮ್ಮ ಬದುಕಿನ ಭಾಗವಾಗಿಸಿಕೊಳ್ಳಬೇಕು ಎಂದರು.

ಜನಜಾಗೃತಿ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿ. ಪಾಯ್ ಮಾತನಾಡಿ, ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸ್ವಯಂ ಸೇವಕರಿಗೆ ಆಪತ್‌ಬಾಂಧವರಾಗಿ, ಸ್ಥಳೀಯ ಯೋಧರಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ. ನಿಸ್ವಾರ್ಥ ಮನೋಭಾವ, ಹೃದಯವಂತಿಕೆ ಮತ್ತು ಸೇವಾ ಬದ್ಧತೆ ಈ ಕಾರ್ಯಕ್ಕೆ ಮೂಲಶಕ್ತಿ ಎಂದು ಹೇಳಿದರು.

ತಾಲ್ಲೂಕು ಯೋಜನಾಧಿಕಾರಿ ರಾಜೇಶ್ ಕಾರ್ಯಕ್ರಮದ ಪ್ರಸ್ತಾವನೆ ನೀಡಿ, ಕಳೆದ ಐದು ವರ್ಷಗಳಲ್ಲಿ ಶೌರ್ಯ ಘಟಕವು ಸಕಲೇಶಪುರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಹಲವು ತುರ್ತು ಸಂದರ್ಭಗಳಲ್ಲಿ ಯಶಸ್ವಿಯಾಗಿ ಸ್ಪಂದಿಸಿದೆ. ನೂರಾರು ಯುವಕರಿಗೆ ಪ್ರಾಥಮಿಕ ಚಿಕಿತ್ಸೆ, ರಕ್ಷಣಾ ಕ್ರಮಗಳು, ಸಂವಹನ ಹಾಗೂ ತಂಡ ನಿರ್ವಹಣೆ ಕುರಿತು ತರಬೇತಿ ನೀಡಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ನೂತನವಾಗಿ ಆಯ್ಕೆಯಾದ ಘಟಕ ಪ್ರತಿನಿಧಿಗಳ ಪೈಕಿ ಇಬ್ಬರನ್ನು ತಾಲ್ಲೂಕು ಮಟ್ಟದ ಮಾಸ್ಟರ್ ಮತ್ತು ಕ್ಯಾಪ್ಟನ್ ಗಳನ್ನಾಗಿ ಆಯ್ಕೆ ಮಾಡಲಾಯಿತು. ಘಟಕವು ಐದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪೂಜ್ಯರು ನೀಡಿದ ವಿಶೇಷ ''ಶೌರ್ಯ ಬ್ಯಾಗ್''ಗಳನ್ನು ಎಲ್ಲಾ ಸ್ವಯಂ ಸೇವಕರಿಗೆ ವಿತರಿಸಲಾಯಿತು.

ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಮಾರ್ಗದರ್ಶಿ ಪುಸ್ತಕವನ್ನು ಘಟಕದ ಸಂಯೋಜಕರಿಗೆ ಇದೇ ಸಂದರ್ಭದಲ್ಲಿ ವಿತರಣೆ ಮಾಡಲಾಯಿತು. ಇದರ ಮೂಲಕ ತಳಮಟ್ಟದಲ್ಲಿ ವೈಜ್ಞಾನಿಕ ಹಾಗೂ ವ್ಯವಸ್ಥಿತ ರೀತಿಯಲ್ಲಿ ಸೇವೆ ಸಲ್ಲಿಸಲು ನೆರವಾಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ಜಿಲ್ಲಾ ನಿರ್ದೇಶಕ ಸುರೇಶ್ ಮೊಯಿಲಿ ಮಾತನಾಡಿ, ಶೌರ್ಯ ಸ್ವಯಂಸೇವಕರು ಮೌಲ್ಯಯುತ ಕೆಲಸಗಳನ್ನು ಮಾಡಿ ತಮ್ಮ ತಿಳುವಳಿಕೆ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಕಾರ್ಯಕ್ರಮದ ಉದ್ದೇಶವನ್ನು ಅರ್ಥೈಸಿಕೊಂಡು ವಿಪತ್ತು ನಿರ್ವಹಣಾ ಘಟಕಗಳನ್ನು ಯಶಸ್ವಿಯಾಗಿ ಮುನ್ನಡೆಸಬೇಕು ಎಂದು ಕರೆ ನೀಡಿದರು.

ಹಾಸನ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೈ ಭೀಮ್ ಮಂಜುನಾಥ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಗಿರೀಶ್ ಮಂಜುನಾಥ್, ಈರಪ್ಪ ನಲ್ಲುಲಿ, ಶೌರ್ಯ ವಿಭಾಗದ ಯೋಜನಾಧಿಕಾರಿಗಳಾದ ಜೈವಂತ್ ಪಟಗಾರ್, ಕಿಶೋರ್, ಬೇಲೂರು ತಾಲ್ಲೂಕಿನ ಯೋಜನಾಧಿಕಾರಿ ಮಂಜುಳಾ, ಮೈಸೂರು ಪ್ರಾದೇಶಿಕ ವಿಭಾಗದ ಯೋಜನಾಧಿಕಾರಿಗಳು ಹಾಗೂ ಮೇಲ್ವಿಚಾರಕರು ಉಪಸ್ಥಿತರಿದ್ದರು.

## ಬೇಕರಿಗೆ ಬೆಂಕಿ: ಸುಟ್ಟು ಕರಕಲಾದ ಆಹಾರ ಪದಾರ್ಥ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿರುವ ರೈಲ್ವೆ ನಿಲ್ದಾಣ ರಸ್ತೆಯ ಮಹಾಲಕ್ಷ್ಮಿ ಸ್ವೀಟ್ಸ್ ಬೇಕರಿಯಲ್ಲಿ ಮಂಗಳವಾರ ಮುಂಜಾನೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಆಹಾರ ಪದಾರ್ಥಗಳು ಸಂಪೂರ್ಣವಾಗಿ ಸುಟ್ಟುಹೋಗಿವೆ.

ಮುಂಜಾನೆ 3ರಿಂದ 4 ಗಂಟೆಯ ಅವಧಿಯಲ್ಲಿ ಬೇಕರಿ ಗೋದಾಮಿನಲ್ಲಿ ಶೇಖರಿಸಿದ್ದ ಮರದ ಹೊಟ್ಟಿಗೆ ಬೆಂಕಿ ತಗುಲಿದೆ. ಬೆಂಕಿಯ ಕೆನ್ನಾಲಿಗೆ ಛಾವಣಿಗೂ ವ್ಯಾಪಿಸಿದೆ. ಪರಿಣಾಮ ಬೇಕರಿಯಲ್ಲಿದ್ದ ಕೆಲವು ವಸ್ತುಗಳು ಸುಟ್ಟುಹೋಗಿ ಅಪಾರ ಪ್ರಮಾಣದ ಮೌಲ್ಯದ ನಷ್ಟ ಉಂಟಾಗಿದೆ.

ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ತ್ವರಿತ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿದ್ದು, ಹೆಚ್ಚಿನ ಅನಾಹುತ ತಪ್ಪಿದೆ. ಬೇಕರಿಯ ಹಿಂಭಾಗದಲ್ಲಿ ರಾತ್ರಿ ವೇಳೆ ಕೆಲ ಪುಂಡ ಪೋಕರಿಗಳು ಮದ್ಯಪಾನ ಹಾಗು ಧೂಮಪಾನ ಮಾಡಿದ ಬಳಿಕ ಎಸೆದ ಸಿಗರೇಟ್ ಕಿಡಿಯಿಂದ ಬೆಂಕಿ ಹೊತ್ತಿಕೊಂಡಿರಬಹುದೆಂಬ ಅನುಮಾನ ವ್ಯಕ್ತವಾಗಿದ್ದು, ಈ ಕುರಿತು ತನಿಖೆ ನಡೆದ ಬಳಿಕ ನಿಖರ ಕಾರಣ ತಿಳಿಯಲಿದೆ.

## ದೀರ್ಘಾವಧಿ ಬಳಿಕ ಪೂರ್ಣಾವಧಿ ವಿಶ್ವಾಸ

» ಮೊದಲನೇ ಪುಟದಿಂದ

**ಹೈಕಮಾಂಡ್ ಅಭಿನಂದಿಸಿದ ಪರಮೇಶ್ವರ್**

ದೇವರಾಜ ಅರಸು ಅವರ ದಾಖಲೆ ಸರಿಗಟ್ಟಿದ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿರುವ ಗೃಹ ಸಚಿವ ಪರಮೇಶ್ವರ್ ಅವರು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ವೇಣುಗೋಪಾಲ್ ಅವರು ದಾಖಲೆ ಮಾಡಲು ಅವಕಾಶ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ವರಿಷ್ಠರಿಗೂ ಅಭಿನಂದಿಸುತ್ತೇನೆ. ಕಾಂಗ್ರೆಸ್‌ನಲ್ಲಿ ಮಾತ್ರ ಇಂತಹ ಅವಕಾಶ ಇದೆ. ದೇವರಾಜ ಅರಸರಿಗೆ ಅವಕಾಶ ಕೊಡಲಾಗಿತ್ತು. ಈಗ ಸಿದ್ದರಾಮಯ್ಯ ಅವರಿಗೆ ಕೊಟ್ಟಿದ್ದಾರೆ. ಇಂತಹ ಬೆಳವಣಿಗೆ ಇಲ್ಲಿ ಮಾತ್ರ ಸಾಧ್ಯ. ಅಭಿವೃದ್ಧಿ, ಬಡವರ ಬಗ್ಗೆ ಪಕ್ಷಕ್ಕೆ ಬದ್ಧತೆ ಇದೆ, ಇಬ್ಬರು ನಾಯಕರು ಆ ಬದ್ಧತೆ ಇಟ್ಟು ಕೊಂಡಿದ್ದರು.

**ಕರ್ನಾಟಕದಲ್ಲಿ ಬಿ.ಎಸ್. ಯಡಿಯೂರಪ್ಪ ಇಲ್ಲ ಎಂದರೆ ಬಿಜೆಪಿ ಇಲ್ಲ, ಹೆಚ್.ಡಿ.ದೇವೇಗೌಡರು ಇಲ್ಲ ಎಂದರೆ ಜೆಡಿಎಸ್ ಪಕ್ಷ ಇಲ್ಲ. ಹಾಗೆಯೇ ಸಿದ್ದರಾಮಯ್ಯ ಇಲ್ಲ ಎಂದರೆ ಕಾಂಗ್ರೆಸ್ ಪಕ್ಷ ಇಲ್ಲ. ಸಿದ್ದರಾಮಯ್ಯಗೆ ಇನ್ನಷ್ಟು ಪುಣ್ಯ, ಶ್ರೇಯಸ್ಸು ಲಭಿಸಲಿ. 2028ರಲ್ಲೂ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು.**

**– ಕೆ.ಎನ್.ರಾಜಣ್ಣ, ಮಾಜಿ ಸಚಿವ**

ಅದಕ್ಕೆ ಅವರು ದಾಖಲೆ ಮಾಡಿದ್ದಾರೆ ಎಂದರು. ಪೂರ್ಣಾವಧಿ ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಅವರು ಹೇಳಿದ ಮೇಲೆ ಇನ್ನೇನಿದೆ. ಅವರ ಮೇಲೆ ಅವರಿಗೆ ವಿಶ್ವಾಸವಿದೆ, ನಮಗೂ ಇದೆ ಎಂದು ಸ್ಪಷ್ಟಪಡಿಸಿದರು.

## ಮನಸ್ಸನ್ನು ಕೇಂದ್ರೀಕರಿಸುವ ಸಾಧನವೇ ಮಂತ್ರ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಮಂತ್ರ ಎಂದರೆ ಮನಸ್ಸನ್ನು ಕೇಂದ್ರೀಕರಿಸುವ ಸಾಧನವಾಗಿ ಉಪಯೋಗಿಸುವ ಒಂದು ಪವಿತ್ರ ಶಬ್ದವಾಗಿದೆ. ಇದನ್ನು ಧ್ಯಾನ, ಪ್ರಾರ್ಥನೆ, ಮತ್ತು ಆಧ್ಯಾತ್ಮಿಕ ಅಭ್ಯಾಸಗಳಲ್ಲಿ ಇದನ್ನು ಬಹಳಷ್ಟು ಬಾರಿ ಇದನ್ನು ಉಪಯೋಗಿಸುತ್ತೇವೆ. ಮಂತ್ರವನ್ನು ಸರಿಯಾದ ಕ್ರಮದಲ್ಲಿ ಪಠಣೆ ಮಾಡಿದರೆ ಮಾನಸಿಕ ಶಾಂತಿ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ನೀಡುತ್ತದೆ ಎಂದು ಬೆಳಗಾವಿಯ ಪ್ರತಿಷ್ಠಾಚಾರ್ಯ ಶಾಂತಿನಾಥ ಪಾರ್ಶ್ವನಾಥ್ ಉಪಾಧ್ಯೆ ಹೇಳೀದರು.

ಭಂಡಾರ ಬಸದಿಯ ಹುಳ್ಳ ಸಭಾ ಮಂಟಪದಲ್ಲಿ ಮಂಗಳವಾರ ಆಯೋಜಿಸಿದ್ದ 5ನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕ ಸಮ್ಮೇಳನದಲ್ಲಿ ಯಂತ್ರ ಮಂತ್ರ ತಂತ್ರ ಗೋಷ್ಠಿಯಲ್ಲಿ ಉಪನ್ಯಾಸ ನೀಡಿದರು.

ಧರ್ಮಕ್ಕೆ ಮೂಲ ಆಧಾರ ಮಂತ್ರ ನಂತರ ಯಂತ್ರ, ಮಂತ್ರ ಯಂತ್ರಗಳ ಪ್ರಯೋಗವೇ ತಂತ್ರವೆನಿಸುತ್ತದೆ. ಓಂಕಾರ ಸಹಿತ ಮಂತ್ರಗಳಿಗೂ ಕ್ರಮ ಬದ್ಧತೆ ಇದ್ದು, ಪಂಚ ಪರಮೇಷ್ಠಿಗಳ ಣಮೋಕಾರ ಮಂತ್ರ 84 ಲಕ್ಷ ಮಂತ್ರಗಳಿಗೆ ಮೂಲ ಮಂತ್ರ ಮತ್ತು ರಾಜ ಮಂತ್ರವಾಗಿದೆ. ಇದು ಜೈನ ಧರ್ಮದ ಪ್ರಮುಖ ಮತ್ತು ಪ್ರಾಥಮಿಕ ಮಂತ್ರವಾಗಿದ್ದು, ಪಂಚಪರಮೇಷ್ಠಿಗಳಾದ ಅರಿಹಂತ, ಅಶರೀರ ಸಿದ್ಧರು, ಆಚಾರ್ಯರುಮ ಉಪಾಧ್ಯಾಯರು, ಸಾಧು ಮುನಿಗಳ ಮೊದಲ ಅಕ್ಷರಗಳಾದ ಅ ಆ ಆ ಉ ಮೆಂಬ 5 ಅಕ್ಷರಗಳು ಸೇರಿ ಓಂಕಾರ ರಚನೆಯಾಗಿದೆ. ಈ ಮಂತ್ರವು ಗುಣಗಳಿಗೆ ನಮಸ್ಕರಿಸಲು ಹೇಳಲಾಗಿದ್ದು, ಯಾವುದೇ ವ್ಯಕ್ತಿಗೆ ಹೇಳಿರುವುದಿಲ್ಲ. ಮಂತ್ರಗಳನ್ನು ಉಚ್ಚರಿಸಲು ಬ್ರಾಹ್ಮಿ ಮುಹೂರ್ತ ಸರ್ವ ಶ್ರೇಷ್ಠವಾಗಿದೆ ಎಂದು ಆಚಾರ್ಯರುಗಳು ಗ್ರಂಥಗಳಲ್ಲಿ ಹೇಳಿದ್ದಾರೆ ಎಂದರು.

ಬೆಳಗಾವಿಯ ಚಿನ್ನಪಟ್ಟಣ ಸಹ ಪ್ರತಿಷ್ಠಾಚಾರ್ಯ ಪ್ರವೀಣ್ ಬಾಬೂರಾವ್ ಉಪಾಧ್ಯೆ, ದೀಪಕ್ ಅಜಿತ್ ಉಪಾಧ್ಯೆ, ಆನಗೊಳ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಎಸ್.ಪಿ.ಜಿನೇಶ್ ಕುಮಾರ್, ಪಂಡಿತ ಸಾಗರ ಕಳೂರಿನ ಪಾರ್ಶ್ವನಾಥ ಇಂದ್ರ, ಎಸ್.ಡಿ.ಫಣೀಂದ್ರ ಕುಮಾರ್, ಪ್ರೇಂ ಕುಮಾರ್, ಸನ್ಮತಿ, ರತನ್, ಇತರರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ನಾನೂರಕ್ಕೂ ಅಧಿಕ ಅರ್ಚಕರು ಭಾಗವಹಿಸಿದ್ದರು.

## ಶಿಕ್ಷಣ-ಆರೋಗ್ಯ ದೇಶದ ಅಭಿವೃದ್ಧಿಗೆ ಮೂಲಾಧಾರ

» ಮೊದಲನೇ ಪುಟದಿಂದ

ರೂಢಿಸಿಕೊಂಡು ಕರ್ತವ್ಯ ನಿರ್ವಹಿಸಬೇಕು. ನಾನು ಕೆಲವೊಂದು ಅಂಗನವಾಡಿ ಕೇಂದ್ರಗಳಿಗೆ ಆಗಾಗ ಭೇಟಿ ನೀಡಿದ ವೇಳೆ ಕೆಲವೊಂದು ಅಂಗನವಾಡಿಗಳಲ್ಲಿ ಸರಿಯಾದ ನಿರ್ವಹಣೆ ಇಲ್ಲದಿರುವುದನ್ನು ಇರುವುದನ್ನು ಗಮನಿಸಿದ್ದೇನೆ. ಇಂತಹ ಘಟನೆಗಳು ಮರುಕರುಳಿಸಬಾರದೆಂದು ಸೂಚನೆ ನೀಡಿದರು.

ಮುಕ್ಕುಂದೂರು ಮಠದ ಶ್ರೀ ಮಹಾಂತೇಶ್ ಸ್ವಾಮೀಜಿ ಅವರು ಮಾತನಾಡಿ, ಜನಪ್ರತಿನಿಧಿಗಳು, ಅಧಿಕಾರಿಗಳು ಜನರ ಸೇವೆಯನ್ನು ಜನಾರ್ದನ ಸೇವೆ ಎಂದು ತಿಳಿದು ಮಾಡುವ ಕಾಯಕ ಜೀವನದಲ್ಲಿ ಯಶಸ್ಸು ತಂದುಕೊಡುತ್ತದೆ. ಈ ನಿಟ್ಟಿನಲ್ಲಿ ಶಾಸಕ ಸಿಮೆಂಟ್ ಮಂಜು ನಿರಂತರ ಜನರೊಟ್ಟಿಗೆ ಬೆರೆತು, ಸಾರ್ವಜನಿಕರಿಗೆ ಸ್ಪಂದಿಸುತ್ತಿರುವ ಗುಣ ಶ್ಲಾಘನೀಯ. ಶಾಸಕರಿಗೆ ದೇವರು ಮತ್ತಷ್ಟುಶಕ್ತಿ ನೀಡಿ ಜನರ ಕಷ್ಟಕ್ಕೆ ಸಂಜೀವಿನಿಯಾಗಲಿ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಾಜಮ್ಮ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಣಧಿಕಾರಿ ಗಿರೀಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಜ್ಯೋತಿ ಲಕ್ಷೀ, ಕಾರ್ಲೆ ಆಸ್ಪತ್ರೆ ವೈದ್ಯ ತೇಜಸ್ವಿ, ಪಿ.ಡಿ.ಓ ಸುರೇಶ್, ಮುಖಂಡರಾದ ಚನ್ನಕೇಶವ ಗೌಡ, ನಿಸರ್ಗ ಸತೀಶ್ ಹರೀಶ್,, ನಿತಿನ್ ಉಡುವಾರೆ, ಪ್ರದೀಪ್, ಗಿರಿತೇಜ, ದಯಾನಂದ ಉಪಸ್ಥಿತರಿದ್ದರು.

## ಚೆನ್ನದ ಪದಕ

**ಹೊಳೆನರಸೀಪುರ:** ತಾಲ್ಲೂಕಿನ ಅಣ್ಣೇಚಾಕನಹಳ್ಳಿ ಗ್ರಾಮದ ನಿವಾಸಿ ಮಾಜಿ ಶಾಸಕ ದಿ.ಎ.ದೊಡ್ಡೇಗೌಡರ ಮೊಮ್ಮಗ ಎ.ಸಿ. ಗಣೇಶ್‌ಗೌರವ್ ಎಂಎಸ್‌ಡ್ಬ್ಲೂ ಕೋರ್ಸ್ ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ.

ವಕೀಲ ಎ.ಡಿ.ಚಂದ್ರಶೇಖರ್ ಪುತ್ರನಾಗಿದ್ದು, ಮೈಸೂರು ಮಾನಸ ಗಂಗೋತ್ರಿ ವಿವಿಯಲ್ಲಿ ಮಾಸ್ಟರ್ ಆಫ್ ಸೋಷಿಯಲ್ ವರ್ಕ್ ವಿಷಯವಾಗಿ ವ್ಯಾಸಂಗ ನಡೆಸಿದ್ದು, ಇವರ ಸಮಾಜ ಕಾರ್ಯಕ್ಕಾಗಿ ಪ್ರೊ.ಟಿಬಿಬಿಎಸ್‌ವಿ ರಾಮಣ್ಣಯ್ಯನವರ ಚಿನ್ನದ ಪದಕ ಪ್ರಧಾನಗೊಳಿಸಲಾಗಿದೆ. ಮೊನ್ನೆಯಷ್ಟೆ ಮೈಸೂರು ವಿ.ವಿ. ನಡೆಸಿದ ಘಟಿಕೋತ್ಸವದಲ್ಲಿ ಕುಲಪತಿಗಳು ಪ್ರಶಸ್ತಿ ಹಾಗೂ ಪದಕ ಪ್ರಧಾನಗೊಳಿಸಿದರು.

## ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಬೈಚನಹಳ್ಳಿ ಗ್ರಾಮಾಂತರ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮಾಜಿ ಸಚಿವ ಕೆ.ಬಿ.ಮಲ್ಲಪ್ಪನವರ ಸ್ಮರಣಾರ್ಥ ಅವರ ಮಗ ಡಾ.ಮೋಹನ್ ಮಲ್ಲಪ್ಪ ಅವರು ಉಚಿತವಾಗಿ ನೋಟ್ ಪುಸ್ತಕ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಮ್ಮ ತಂದೆ 5 ದಶಕಗಳ ಕಾಲ ಕ್ಷೇತ್ರದಲ್ಲಿ ಸಜ್ಜನ ರಾಜಕಾರಣಿಯಾಗಿ ಸೇವೆ ಸಲ್ಲಿಸಿದ್ದಾರೆ. 1965 ರಂದು ಉತ್ತಮ ತಂಡವನ್ನು ಕಟ್ಟಿಕೊಂಡು ಈ ಶಾಲೆ ಆರಂಭಿಸಿ ಸುಮಾರು 48 ವರ್ಷಗಳ ಕಾಲ ಸುದೀರ್ಘವಾಗಿ ಸಂಸ್ಥೆ ಅಧ್ಯಕ್ಷರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇಲ್ಲಿ ಶಿಕ್ಷಣ ಪಡೆದವರು ಸರ್ಕಾರಿ, ಖಾಸಗಿ ಹಾಗೂ ಇತರೆ ಕ್ಷೇತ್ರದಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಹಲವರು ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ಇದು ಈ ಶಿಕ್ಷಣ ಸಂಸ್ಥೆ ನೀಡುತ್ತಿರುವ ಉತ್ತಮ ಶಿಕ್ಷಣ ಬೋಧನೆ, ಸಂಸ್ಕಾರ ಪ್ರಮುಖವಾಗಿದೆ. ಇದೇ ನಿಟ್ಟಿನಲ್ಲಿ ಇಂದು ಕಲಿಯುತ್ತಿರುವ ವಿದ್ಯಾರ್ಥಿಗಳು ತಮ್ಮ ಬದುಕನ್ನು ರೂಪಿಸಿಕೊಂಡು ಸತ್ಪ್ರಜೆಗಳಾಗಿ ಸಮಾಜಕ್ಕೆ ಕೊಡುಗೆ ನೀಡಿ ಎಂದು ಹಾರೈಸಿದರು.

ಮಾಜಿ ತಾಪಂ ಅಧ್ಯಕ್ಷ ಯೋಗೇಶ್ ಮಾತನಾಡಿ, ಒಂದೇ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಕ್ಷರಾಗಿ 48 ವರ್ಷಗಳ ಸುಧೀರ್ಘ ಸೇವೆ ಮಾಡುವ ಅವಕಾಶ ಯಾವ ರಾಜಕಾರಣಿಗೂ ಸಿಗುವುದಿಲ್ಲ. ಆದರೆ ಸ್ವಚ್ಛವಾಗಿದ್ದ ಮಲ್ಲಪ್ಪನವರಿಗೆ ದೊರಕಿದೆ. ಇದರಿಂದಲೇ ಈ ಸಂಸ್ಥೆ ಇಂದಿಗೂ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಮಲ್ಲಪ್ಪನವರು ನಿಧನದ ಬಳಿಕ ಅವರ ಮಗ ಡಾ.ಮೋಹನ್ ಮಲ್ಲಪ್ಪ ಅವರು ಅಧ್ಯಕ್ಷರಾಗಿ ಮುಂದುವರಿದಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಅಲ್ಲದೆ ಇದೇ ಮೊದಲ ಬಾರಿಗೆ ಮಲ್ಲಪ್ಪನವರ ಪುಣ್ಯಸ್ಮರಣೆ ಆಚರಣೆ ಮತ್ತು ಅವರ ಹೆಸರಿನ್ನಲಿ ನೋಟ್ ಪುಸ್ತಕ ವಿತರಣೆ ಮಾಡುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು.

ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ರಘು ಮಾತನಾಡಿ, ಕಳಂಕರಹಿತ ರಾಜಕಾರಣಿ ಯಾಗಿ ನಮ್ಮ ಶಿಕ್ಷಣ ಸಂಸ್ಥೆ ಅಭಿವೃದ್ಧಿಗೆ ಪ್ರಮುಖ ಪಾತ್ರವಹಿಸಿರುವ ಮಲ್ಲಪ್ಪನವರ ಪುತ್ಥಳಿಯನ್ನು ಶಿಕ್ಷಣ ಸಂಸ್ಥೆ ಆವರಣದಲ್ಲಿ ಸ್ಥಾಪಿಸಿದರೆ ಇಂದಿನ ಮಕ್ಕಳಿಗೆ ಅವರ ಬಗ್ಗೆ ತಿಳಿಯಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಆಡಳಿತ ಮಂಡಳಿ ಗಮನ ಹರಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆ ಖಜಾಂಚಿ ಜಯರಾಮ, ನಿರ್ದೇಶಕರುಗಳಾದ ಆಂ

# ಚನ್ನಕೇಶವ ನಗರ ವಾಸಿಗಳಿಗೆ ತಿಂಗಳೊಳಗೆ ಹಕ್ಕುಪತ್ರ

## ಶಾಸಕ ಹೆಚ್.ಕೆ.ಸುರೇಶ್ ಭರವಸೆ | ನಿವಾಸಿಗಳೊಂದಿಗೆ ಸಭೆ, ಸದೀರ್ಘ ಚರ್ಚೆ

• ಪ್ರಜೋದಯ ವರದಿ

**ಬೇಲೂರು:** ಶಾಸಕ ಹೆಚ್.ಕೆ.ಸುರೇಶ್ ಅವರು ಪಟ್ಟಣದ ಚನ್ನಕೇಶವ ನಗರದ ನಿವಾಸಿಗಳೊಂದಿಗೆ ಸಭೆ ನಡೆಸಿ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಸುದೀರ್ಘ ಚರ್ಚಿಸಿದ ಬಳಿಕ, ಕೆಲ ಸಮಸ್ಯೆಗಳಿಗೆ ಸ್ಥಳದಲ್ಲೇ ಉತ್ತರ ಮತ್ತು ಪರಿಹಾರ ನೀಡುವ ಕೆಲಸ ಮಾಡಿದರು.

ಒಂದು ತಿಂಗಳೊಳಗೆ ನಿವಾಸಿಗಳಿಗೆ ಸೂಕ್ತ ಹಕ್ಕುಪತ್ರ ಹಾಗು ಪುರಸಭೆಯಿಂದ ಇ-ಸ್ವತ್ತು ನೀಡಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಆದರಿಂದ ಚನ್ನಕೇಶವನಗರ ನಿವಾಸಿಗಳು ಸಂತಸಗೊಂಡರು.

ಚನ್ನಕೇಶವನಗರ ಬಡಾವಣೆ ನಿರ್ಮಿಸಿ ಎರಡು ದಶಕಗಳೇ ಕಳೆದಿದ್ದರೂ ನಿವಾಸಿಗಳಿಗೆ ಹಕ್ಕಪತ್ರಗಳನ್ನು ಸಂಬಂಧಪಟ್ಟ ಇಲಾಖೆ ನೀಡದೆ ಸತಾಯಿಸುವ ಜೊತೆಗೆ ಚನ್ನಕೇಶವ ನಗರಕ್ಕೆ ಸುಗಮ ರಸ್ತೆ ಇಲ್ಲದೆ ನಿವಾಸಿಗಳು ಪರದಾಡುವಂತಾಗಿತ್ತು. ಆದರಿಂದ ರೊಚ್ಚಿಗೆದ್ದ ಸ್ಥಳೀಯ ನಿವಾಸಿಗಳು ಶಾಸಕ ಹೆಚ್.ಕೆ.ಸುರೇಶ್ ಅವರಲ್ಲಿ ಮನವಿ ಸಲ್ಲಿಸಿದ್ದರು. ಈ ಹಿನ್ನಲೆ ಮಂಗಳವಾರ ಖುದ್ದು ಶಾಸಕರೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸ್ಥಳಕ್ಕೆ ತೆರಳಿ ಅಹವಾಲುಗಳನ್ನು ಆಲಿಸಿ, ಪರಿಹಾರದ ಭರವಸೆ ನೀಡಿದರು.

ಬಳಿಕ ಮಾತನಾಡಿದ ಶಾಸಕರು, ನಾನಿಲ್ಲಿಗೆ ಶಾಸಕನಾಗಿ ಬಂದಿರುವುದು ಜನರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಸಲು ಅಲ್ಲ, ಪೊಳ್ಳು ಭರವಸೆ ನೀಡಿ ಚಪ್ಪಾಳೆ ಗಿಟ್ಟಿಸಿಕೊಳ್ಳುವ ಅಗತ್ಯ ವಿಲ್ಲ. ಬಡವರ, ಶೋಷಿತರ ಮತ್ತು ದೀನ ದಲಿತರ ಬಗ್ಗೆ ಕೆಲಸ ಮಾಡುವುದು ನಮ್ಮ ಉದ್ದೇಶ. ಚನ್ನಕೇಶವ ನಗರಕ್ಕೆ ಅಗತ್ಯವಾದ ರಸ್ತೆ ಬಗ್ಗೆ ಈಗಾಗಲೇ ಸಂಬಂಧ ಪಟ್ಟವರಲ್ಲಿ ಚರ್ಚೆ ನಡೆಸಿ ಶೀಘ್ರವೇ ರಸ್ತೆಗೆ ಕಾಯಕಲ್ಪ ನೀಡಲು ಬದ್ಧ ಎಂದು ತಿಳಿಸಿದರು.

ಅಂಬೇಡ್ಕರ್ ವಿಶೇಷ ಯೋಜನೆಯ ಸುಮಾರು 72 ಮನೆಗಳಿಗೆ ಮತ್ತು ಉಳಿದ 100 ಮನೆಗಳಿಗೆ ಹಕ್ಕು ಪತ್ರ ನೀಡಿಲ್ಲ, ಈಗಾಗಲೇ 37 ನಿವಾಸಿಗಳಿಗೆ ಹಕ್ಕುಪತ್ರ ಲಭ್ಯವಾಗಿದೆ. ಅದರ ಜೊತೆ ಉಳಿದ ನಿವಾಸಿಗಳ ಮನೆಗಳಿಗೆ ತಿಂಗಳ ಒಳಗೆ ಹಕ್ಕುಪತ್ರ ನೀಡಲು ಕೊಳಗೇರಿ ಅಭಿವೃದ್ಧಿ ನಿಗಮದ ಅಧಿಕಾರಿ ಶ್ರೀರಾಮ್ ಅವರಿಂದ ಮಾಹಿತಿ ಪಡೆದು ಶೀಘ್ರ ಹಕ್ಕುಪತ್ರ ವಿತರಣೆಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪುರಸಭೆ ಮುಖ್ಯಾಧಿಕಾರಿ, ಕಂದಾಯ ಅಧಿಕಾರಿಗಳು ಹಾಗು ನಮ್ಮ ಆಪ್ತ ಕಾರ್ಯದರ್ಶಿಗಳಿಂದ ಇಂದಿನಿಂದಲೇ ಮನೆ ಮನೆ ಭೇಟಿ ನೀಡಿ 1 ತಿಂಗಳಲ್ಲಿ ನೀಡಲು ಸೂಚನೆ ನೀಡಲಾಗಿದೆ. ಹಕ್ಕುಪತ್ರ ವಿತರಣೆ ಬಳಿಕ ಪುರಸಭೆ ಯಾವುದೇ ವಿಳಂಬ ವಿಲ್ಲದೆ ಇ-ಸ್ವತ್ತು ನೀಡಬೇಕು, ಅಲ್ಲದೆ ಇ-ಸ್ವತ್ತುಗೆ ತಗಲುವ ವೆಚ್ಚವನ್ನು ನಾನೇ ವೈಯಕ್ತಿಕವಾಗಿ ಭರಿಸುವ ಬಗ್ಗೆ ಭರವಸೆ ನೀಡಿದರು.

ಪುರಸಭಾ ಸದಸ್ಯ ಬಿ.ಸಿ.ಜಗದೀಶ್ ಅವರು ಮಾತನಾಡಿ, ಶಾಸಕರು ಬದ್ಧತೆವುಳ್ಳ ರಾಜಕಾರಣಿ. ಇಲ್ಲಿನ ಪುರಸಭೆ ಸಮಸ್ಯೆಯನ್ನು ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಿ ಈಗಾಗಲೇ ಶಾಸಕರು ಬಡವರಿಗೆ ಆಶ್ರಯ ಸಮಿತಿಯಿಂದ ನಿವೇಶನ ನೀಡಲು ಮತ್ತು ಚನ್ನಕೇಶವ ನಗರ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ತೋರಿದ ಆಸಕ್ತಿ ನಿವಾಸಿಗಳಿಗೆ ಸಂತಸ ತಂದಿದೆ. ಪುರಸಭೆಯಿಂದ ನಿವಾಸಿಗಳಿಗೆ ಇ-ಸ್ವತ್ತು ಮಾಡಿಸಲು ತಾವೇ ಸರ್ಕಾರಿ ವೆಚ್ಚ ಭರಿಸಲು ಮುಂದಾಗಿರುವುದು ನಿಜಕ್ಕೂ ಸಂತೋಷ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುರಸಭಾ ಸದಸ್ಯರಾದ ಜಗದೀಶ್, ಶ್ರೀನಿವಾಸ, ಮುಖ್ಯಾಧಿಕಾರಿ ಬಸವರಾಜ್ ಶಿವಗ್ಗಾಂವಿ, ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜ್, ಎಂ.ಜೆ.ನಿಂಗರಾಜ್, ಅರ್ಬನ್ ಬ್ಯಾಂಕ್ ಅಧ್ಯಕ್ಷ ಪೈಂಟ್ ರವಿ, ಛಲವಾದಿ ಮಹಾಸಭಾ ಅಧ್ಯಕ್ಷ ತೆಂಡೇಕೆರೆ ರಮೇಶ್ ಇದ್ದರು.

**"ನಾನು ಚುನಾವಣೆ ಪೂರ್ವದಲ್ಲಿ ಪ್ರಚಾರಕ್ಕೆ ಬಂದಾಗ ಚನ್ನಕೇಶವ ನಗರದ ನಿವಾಸಿಗಳ ಬವಣೆ ಅರಿತು ಶೀಘ್ರವೇ ಹಕ್ಕುಪತ್ರ ನೀಡುವ ಬಗ್ಗೆ ಮಾತು ಕೊಟ್ಟಿದ್ದೆ. ಈ ಹಿನ್ನಲೆ ನಿವಾಸಿಗಳಿಗೆ ಅಗತ್ಯ ಹಕ್ಕುಪತ್ರ ವಿತರಣೆ ಮತ್ತು ಇ-ಸ್ವತ್ತು, ಇಲ್ಲಿನ ರಸ್ತೆ ಕಾಯಕಲ್ಪದ ಬಗ್ಗೆ ನಿವಾಸಿಗಳು ಮತ್ತು ಜನಪ್ರತಿನಿಧಿಗಳು, ಅಧಿಕಾರಿಗಳ ಸಭೆ ನಡೆಸಲಾಗಿದೆ.**

**-ಹೆಚ್.ಕೆ.ಸುರೇಶ್, ಶಾಸಕ**

## ಜ.10 ರಂದು ಚಂದ್ರಶೇಖರ ಸ್ವಾಮೀಜಿ ಸಂಸ್ಮರಣೋತ್ಸವ

• ಪ್ರಜೋದಯ ವರದಿ

**ಮಾಡಾಳು:** ಮಾಡಾಳು ನಿರಂಜನ ಪೀಠದ ಹಿರಿಯ ಗುರುಗಳಾದ ಲಿಂಗೈಕ್ಯ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರ 19ನೇ ವರ್ಷದ ಪುಣ್ಯ ಸಂಸ್ಮರಣೋತ್ಸವ ಹಾಗು 26ನೇ ಅರಿವಿನ ಜಾಗೃತಿ ಕಾರ್ಯಕ್ರಮ ಜ.10 ರಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಜರುಗಲಿದೆ ಎಂದು ಶ್ರೀ ರುದ್ರಮುನಿ ಸ್ವಾಮೀಜಿ ಅವರು ತಿಳಿಸಿದರು.

ಮಂಗಳವಾರ ಗ್ರಾಮದ ನಿರಂಜನ ಪೀಠದ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ವರ್ಷದ ಸಂಪ್ರದಾಯದಂತೆ ಹಾಗು ಭಕ್ತರ ಆಶಯದಂತೆ ನಡೆಯಲಿದೆ. ಬೆಳಿಗ್ಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ನಡೆಯಲಿದ್ದು 9.30ಕ್ಕೆ ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಹಿರಿಯ ಗುರುಗಳ ಮತ್ತು ಜಗಜ್ಯೋತಿ ಬಸವೇಶ್ವರರ ಭಾವಚಿತ್ರ ಮೆರವಣಿಗೆ ಗ್ರಾಮದ ಬೀದಿಗಳಲ್ಲಿ ನಡೆಯಲಿದೆ ಎಂದರು.

ವಿದ್ಯಾರ್ಥಿ ನಿಲಯ ಕಟ್ಟಡ ಉದ್ಘಾಟನೆಯನ್ನು ಕೆರಗೋಡಿ ರಂಗಾಪುರ ಕ್ಷೇತ್ರದ ಶ್ರೀ ಗುರುಪರ ದೇಶಿಕೇಂದ್ರ ಸ್ವಾಮೀಜಿ ನೆರವೇರಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ ವಹಿಸುವರು ಎಂದರು. ಸಭಾ ಕಾರ್ಯಕ್ರಮದ ಉದ್ಘಾಟನೆ ಪಾಂಡು ಮಟ್ಟಿ ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮೀಜಿ ನೆರವೇರಿಸುವರು. ಸಂಸದ ಶ್ರೇಯಸ್ ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಂಗೇಗೌಡ ಅವರು ಪಾಲ್ಗೊಳ್ಳಲಿದ್ದಾರೆಂದು ಮಾಹಿತಿ ನೀಡಿದರು.

## ಹುಸಿಬಾಂಬ್ ಬೆದರಿಕೆ: ಇ-ಮೇಲ್‌ನಲ್ಲಿ ಬ್ಲ್ಯಾಕ್ ಮೇಲ್

» **ಮೊದಲನೇ ಪುಟದಿಂದ**

ಸಂದೇಶ ಬಂದ ತಕ್ಷಣವೇ ನ್ಯಾಯಾಧೀಶರು, ಅಧಿಕಾರಿಗಳು, ಸಿಬ್ಬಂದಿ ಹಾಗು ವಕೀಲರು ನ್ಯಾಯಾ ಲಯದ ಸಭಾಂಗಣದಿಂದ ಹೊರಬಂದು ಸುರಕ್ಷಿತ ಸ್ಥಳಗಳಿಗೆ ತೆರಳಿದರು. ಕೂಡಲೇ ಬಾಂಬ್ ನಿಷ್ಕ್ರಿಯೆ ದಳ ಹಾಗು ಶ್ವಾನದಳ ಸ್ಥಳಕ್ಕೆ ಧಾವಿಸಿ ಸಂಪೂರ್ಣ ಪರಿಶೀಲನೆ ನಡೆಸಿತು. ಹಲವು ಗಂಟೆಗಳ ತಪಾಸಣೆಯ ಬಳಿಕ ಯಾವುದೇ ಬಾಂಬ್ ಅಥವಾ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲವೆಂದು ಅಧಿಕಾರಿಗಳು ಸ್ಪಷ್ಟಪಡಿಸಿ ದರು. ನಂತರ ಮಧ್ಯಾಹ್ನದ ಬಳಿಕ ನ್ಯಾಯಾಲಯದ ಕಾರ್ಯ ಚಟುವಟಿಕೆಗಳು ಪುನರಾರಂಭಗೊಂಡವು.

**ಇದೇ ಮೊದಲ ಪ್ರಕರಣವಲ್ಲ**

ಇಂತಹ ಬೆದರಿಕೆ ಸಂದೇಶದ ಇದೇ ಮೊದಲ ಪ್ರಕರಣವಲ್ಲ. ಡಿ.15ರಂದು ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಇರುವ ಬಗ್ಗೆ ಇ-ಮೇಲ್ ಮೂಲಕ ಮಾಹಿತಿ ಬಂದಿತ್ತು. ತಪಾಸಣೆಯಲ್ಲಿ ಯಾವುದೇ ಸ್ಫೋಟಕಗಳು ಪತ್ತೆಯಾಗಿ ರಲಿಲ್ಲ. ಅದೇ ರೀತಿ ಡಿ.22 ರಂದು ಆಲೂರು ತಾಲ್ಲೂಕಿನ ತಹಶೀಲ್ದಾರ್ ಕಚೇರಿಗೂ ಇದೇ ಮಾದರಿಯ ಹುಸಿಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಇದರ ಜೊತೆಗೆ ಕೆಲ ತಿಂಗಳ ಹಿಂದೆ ನಗರದ ಖಾಸಗಿ ವಿದ್ಯಾಸಂಸ್ಥೆಯೊಂದಕ್ಕೂ ಬಾಂಬ್ ಇರುವ ಬಗ್ಗೆ ಇ-ಮೇಲ್ ಬಂದಿದ್ದು, ಆತಂಕದ ಹಿನ್ನಲೆ ವಿದ್ಯಾರ್ಥಿಗಳಿಗೆ ರಜೆ ನೀಡಲಾಗಿತ್ತು.

ಇದೀಗ ಜಿಲ್ಲಾ ನ್ಯಾಯಾಲಯಕ್ಕೂ ಇದೇ ರೀತಿಯ ಸಂದೇಶ ಬಂದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಪದೇ ಪದೇ ಬರುತ್ತಿರುವ ಹುಸಿಬಾಂಬ್ ಬೆದರಿಕೆಗಳಿಂದ ಸರ್ಕಾರಿ ಕಚೇರಿಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳು ಹಾಗು ಸಿಬ್ಬಂದಿ ಭೀತಿಯಲ್ಲಿದ್ದು, ಸಾರ್ವಜನಿಕ ವಲಯದಲ್ಲೂ ಭಯದ ವಾತಾವರಣ ನಿರ್ಮಾಣವಾಗಿದೆ. ಪ್ರತಿ ಬಾರಿ ತಪಾಸಣೆ ನಡೆಸಿ ಸುಮ್ಮನಾಗುವುದರಿಂದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವುದಿಲ್ಲ, ಮುಂದೊಂದು ದಿನ ನಿಜವಾದ ಅನಾಹುತ ಸಂಭವಿಸುವ ಅಪಾಯ ವಿದೆ ಎಂದು ಕೆಲ ಸಿಬ್ಬಂದಿ ಆತಂಕ ವ್ಯಕ್ತಪಡಿಸಿದ್ದಾರೆ.

**ಸಾರ್ವಜನಿಕ ವಲಯದಲ್ಲಿ ಆತಂಕ:** ರಾಜ್ಯದ ವಿವಿಧ ಭಾಗಗಳಲ್ಲಿ ಕಳೆದ ಒಂದು ತಿಂಗಳ ಅವಧಿಯಲ್ಲಿ ಸರ್ಕಾರಿ ಕಚೇರಿಗಳು, ನ್ಯಾಯಾಲಯಗಳು ಹಾಗು ಸಾರ್ವಜನಿಕ ಸಂಸ್ಥೆಗಳಿಗೆ ನಿರಂತ ರವಾಗಿ ಹುಸಿಬಾಂಬ್ ಬೆದರಿಕೆ ಸಂದೇಶಗಳು ಬರುತ್ತಿವೆ. ಆದರೆ, ಈವರೆಗೆ ಸರ್ಕಾರ ಹಾಗೂ ಸಂಬಂಧಪಟ್ಟ ಭದ್ರತಾ ಇಲಾಖೆಗಳು ಈ ಸಂದೇಶಗಳ ಮೂಲ ಪತ್ತೆ ಹಚ್ಚುವಲ್ಲಿ ಅಥವಾ ಆರೋಪಿಗಳನ್ನು ಬಂಧಿಸುವಲ್ಲಿ ಪರಿಣಾಮ ಕಾರಿಯಾದ ಕ್ರಮ ಕೈಗೊಂಡಿಲ್ಲವೆಂಬುದು ಸಾರ್ವಜನಿಕ ವಲಯದಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ.

## ಎಟಿಆರ್ ಅಭಿನಂದನಾ ಗ್ರಂಥಕ್ಕೆ ಲೇಖನ ಆಹ್ವಾನ

• ಪ್ರಜೋದಯ ವರದಿ

**ಅರಕಲಗೂಡು:** ಮಾಜಿ ಶಾಸಕ, ಪರಿಸರಕ್ಕಾಗಿ ನಾವು ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಎ.ಟಿ.ರಾಮಸ್ವಾಮಿ ಅವರ ಅಭಿನಂದನಾ ಗ್ರಂಥ ಹೊರತರಲು ಮೈಸೂರಿನ ಎ.ಟಿ.ರಾಮಸ್ವಾಮಿ ಅಭಿನಂದನಾ ಗ್ರಂಥ ಸಮಿತಿ ನಿರ್ಧರಿಸಿದ್ದು, ಆ ಬಗ್ಗೆ ಚರ್ಚಿಸಲು ಜ.10ರ ಶನಿವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕಿನ ಮುದ್ದನಹಳ್ಳಿಯ ಅರಸೀಕಟ್ಟೆ ಅಮ್ಮ ದೇವಾಲಯ ಆವರಣದಲ್ಲಿ ಪೂರ್ವ ಭಾವಿ ಸಭೆ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಸಂಘದ ರಾಜ್ಯಾಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ (ಪರೀಕ್ಷಾಂಗ) ಡಾ.ಎ.ರಂಗಸ್ವಾಮಿ, ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕ ಬಿ.ಕೆ.ಬಸವರಾಜು, ವಕೀಲ ಜನಾರ್ಧನ ಗುಪ್ತ, ಡಾ.ಬಿ.ಈ.ಯೋಗೇಂದ್ರ ಸೇರಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಕೋರಿದೆ. ಜೊತೆಗೆ ಎ.ಟಿ.ರಾಮಸ್ವಾಮಿ ಅವರ ಕುರಿತು ಬರಹಗಳನ್ನು l w gam ಇಲ್ಲಿಗೆ ಕಳುಹಿಸಲು ಕೋರಿದೆ.

# ಕೃಷಿ ಉಳಿದಲ್ಲಿ ಮಾತ್ರ ದೇಶದ ಅಭಿವೃದ್ಧಿ

• ಪ್ರಜೋದಯ ವರದಿ

**ಸಕಲೇಶಪುರ:** ರೈತರು ಹಾಗೂ ಕೃಷಿ ಉಳಿದಲ್ಲಿ ಮಾತ್ರ ದೇಶ ಉಳಿಯಲು ಸಾಧ್ಯ. ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಇತ್ತೀಚಿನ ದಿನಗಳಲ್ಲಿ ರೈತರ ಸಂಖ್ಯೆ ಕಡಿಮೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಸುಸ್ಥಿರ ಕೃಷಿ ಮಿಷನ್ ಅಡಿಯಲ್ಲಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಡುಗೆರೆ ಗ್ರಾಮದಲ್ಲಿ ಅರಿವು ಮೂಡಿಸುವ ಸಭೆ ಹಾಗೂ ಸಮೂಹ ಆರೈಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಗೋವುಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಆಧುನಿಕ ಜೀವನ ಶೈಲಿಯಲ್ಲಿ ಎಲ್ಲರಿಗೂ ಗೋವುಗಳನ್ನು ಸಾಕಲು ಸಾಧ್ಯವಾಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವೇ ಕೆಲವು ರೈತರು ಹಸುಗಳನ್ನು ಸಾಕುತ್ತಿದ್ದಾರೆ. ರೈತರು ಆರ್ಥಿಕವಾಗಿ ಸಬಲರಾಗಬೇಕಾದರೆ ಕೃಷಿ ಜೊತೆಗೆ ಹೈನುಗಾರಿಕೆ ಸಹ ಕೈಗೊಳ್ಳಬೇಕೆಂದರು.

ಗೋವುಗಳನ್ನು ಸಾಕುವುದರಿಂದ ಮನೆಗೆ ಹಾಲು ದೊರಕುವುದು, ಡೈರಿಗೆ ಹಾಲು ಪೂರೈಸುವ ಮೂಲಕ ಆದಾಯಗಳಿಸುವುದು ಹಾಗೂ ಜಮೀನಿಗೆ ಅಗತ್ಯವಾದ ಗೊಬ್ಬರ ದೊರಕು ವಂತಹ ಹಲವು ಲಾಭಗಳಿವೆ. ಹೈನುಗಾರಿಕೆಯಿಂದ ರೈತರಿಗೆ ಹೆಚ್ಚಿನ ಆರ್ಥಿಕ ಲಾಭವಿದ್ದು, ರೈತರು ಈ ದೇಶದ ಬೆನ್ನೆಲುಬು ಎಂದು ಹೇಳಿದರು.

ಸರ್ಕಾರಿ ಸವಲತ್ತುಗಳು ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪುವ ಅಗತ್ಯವಿದೆ. ಕೃಷಿ ಹಾಗೂ ಹೈನುಗಾರಿಕೆಗೆ ಉತ್ತೇಜನ ನೀಡುವ ಸರ್ಕಾರದ ಯೋಜನೆಗಳನ್ನು ಅಧಿ ಕಾರಿಗಳು ತಳಮಟ್ಟದಲ್ಲಿ ಪ್ರಾಮಾಣಿಕ ವಾಗಿ ಅನುಷ್ಠಾನಗೊಳಿಸಿ ರೈತರಿಗೆ ನೆರವಾಗಬೇಕೆಂದು ಸೂಚಿಸಿದರು.

ಕೃಷಿ ಅಧಿಕಾರಿ ಪ್ರಕಾಶ್ ಅವರು ಮಾತನಾಡಿ, ಕುರುಭತ್ತೂರು ಹಾಗೂ ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿಗಳನ್ನು ಮಳೆಯಾಶ್ರಿತ ಪ್ರದೇಶಾಭಿ ವೃದ್ಧಿ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಲಾಗಿದೆ. ಇದು ಕೇಂದ್ರ ಸರ್ಕಾರದ ಮಹತ್ವದ ಯೋಜನೆ. ಈ ಯೋಜನೆಯಡಿ ಹಸು ಮತ್ತು ಮೇಕೆ ಖರೀದಿಗೆ ಆಯ್ಕೆಯಾದ ಫಲಾನುಭವಿ ಗಳಿಗೆ 30,000 ರೂ. ಸಹಾಯ ಧನ ವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆಂ ದರು.

ಈ ಯೋಜನೆಯಿಂದ ಮಲೆನಾಡಿನ ಸಣ್ಣ ಹಾಗೂ ಅತಿಸಣ್ಣ ರೈತರಿಗೆ ಕೃಷಿಯ ಜೊತೆಗೆ ಪಶುಸಂಗೋಪನೆ ಚಟುವಟಿಕೆಗಳನ್ನು ವಿಸ್ತರಿಸಲು ನೆರವಾಗಲಿದ್ದು, ಅವರ ಆದಾಯ ಹೆಚ್ಚಿಕೆವಲ್ಲಿ ಮಹತ್ವದ ಪಾತ್ರ ವಹಿಸಲಿದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಗ್ರಾ.ಪಂಚಾಯಿತಿ ಸದಸ್ಯರು, ಪ್ರಗತಿಪರ ರೈತರು, ಮಹಿಳಾ ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳು ಹಾಗೂ ಫಲಾನುಭವಿಗಳು ಇದ್ದರು.

# ಜೈನ ಧರ್ಮ ಉಳಿವಿಗೆ ಆಚಾರ್ಯರ ಕೊಡುಗೆ ಅಪಾರ

» **ಮೊದಲನೇ ಪುಟದಿಂದ**

ಅರ್ಚಕರು ಸಂಸಾರಿಗಳಾದ ಶ್ರಾವಕರಿಗೆ ಧರ್ಮದ ಹಾದಿಯನ್ನು ತೋರಿಸುವ ಮಾರ್ಗದರ್ಶಕರು ಎಂದರು.

ಇಂದು ಪೌರೋಹಿತ್ಯ ಎಲ್ಲೆಡೆ ತಿರಸ್ಕಾರಕ್ಕೆ ಒಳಗಾಗಿದೆ. ಇವರ ಜೀವನೋಪಾಯಕ್ಕೆ ಬೇಕಾದ ಆದಾಯವಿಲ್ಲದೆ, ಜೈನ ಪುರೋಹಿತರು ತಮ್ಮ ವೃತ್ತಿಯನ್ನು ತೊರೆದು ಲೌಕಿಕ ವಿದ್ಯಾವಂತರಾಗಿ, ಸರ್ಕಾರಿ ಹಾಗೂ ಖಾಸಗಿ ಹುದ್ದೆಗಳಿಗೆ ಸೇರುತ್ತಿರುವುದನ್ನು ಕಾಣಬಹುದು. ಪುರೋಹಿತ ವರ್ಗ ತನ್ನ ವೃತ್ತಿಯನ್ನು ತೊರೆದರೆ, ಜಿನಾಲಯಗಳು ಇನ್ನೂ ಹೀನಸ್ಥಿತಿಗೆ ಬರುವ ಸಾಧ್ಯತೆಗಳಿವೆ. ಒಬ್ಬ ಪುರೋಹಿತ ಅನೇಕ ಬಸದಿಗಳಲ್ಲಿ ಪೂಜೆ ಮಾಡುವ ಪರಿಸ್ಥಿತಿ ಬಂದೊದಗಿದೆ. ಶ್ರಾವಕರಿಲ್ಲದೆ ಅಥವಾ ಇವರ ಅನಾಸಕ್ತಿಯ ಕಾರಣದಿಂದ ನಿತ್ಯಪೂಜೆಗಳನ್ನು ನೋಡುವವರಿಲ್ಲದ ಸ್ಥಿತಿಗಳಿವೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸರ್ಕಾರದ ಸಹಾಯದೊಂದಿಗೆ ನಾಡಿನ ಅನೇಕ ಜಿನಮಂದಿರಗಳ ಜೀರ್ಣೋದ್ಧಾರದ ಕಾರ್ಯಗಳು ಜರುಗಿವೆ. ವೈಭಯುತವಾದ ಪಂಚಕಲ್ಯಾಣ ಮಹೋತ್ಸವಗಳು ಸಂಪನ್ನಗೊಂಡಿದೆ. ಹೊಸ ಕ್ಷೇತ್ರಗಳ ನಿರ್ಮಾಣಗಳಾಗುತ್ತಲಿದೆ. ಆದರೆ, ಅರ್ಚಕರ ಕುರಿತಾದ ಯೋಜನೆ ಹಾಗೂ ಯೋಚನೆಗಳನ್ನು ಸಮಾಜ ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ಸರ್ಕಾರ ಪುರೋಹಿತರಿಗೆ ಜೀವನ ನಿರ್ವಹಣೆಯ ಭತ್ಯೆಯ ಸೌಲಭ್ಯವನ್ನು ಕರ್ನಾಟಕದಲ್ಲಿ ಜಾರಿ ಮಾಡಿದ್ದರೂ, ಆಡಳಿತ ಮಂಡಳಿಯನ್ನು ನಿಯಮಾನುಸಾರ ನೋಂದಣಿ ಮಾಡದೆ, ಪುರೋಹಿತರು ಸೌಲಭ್ಯಗಳಿಂದ ವಂಚಿತರಾಗಿರುವುದನ್ನು ಗಮನಿಸಬಹುದು.

ಪೂಜೆ ಮಾ